## ಅಧ್ಯಾಯ–೧೨
# ಪ್ರೇಕ್ಷಣೀಯ ಸ್ಥಳಗಳು

ಭಾರತೀಯ ಸಂಸ್ಕೃತಿಗಿರುವಂತೆ ಕನ್ನಡ ಸಂಸ್ಕೃತಿಗೂ ಸುದೀರ್ಘ ಪರಂಪರೆ ಇದೆ. ಈ ಪರಂಪರೆಯ ಎಲ್ಲ ರೀತಿಯ ಸತ್ವಸಾರಗಳನ್ನು ಹೀರಿಬೆಳೆದ ನಂಜನಗೂಡು ತಾಲೂಕಿನ ಹಲವು ಸ್ಥಳಗಳು ಇತಿಹಾಸದ ಸೊಗಡನ್ನೂ ವಾಸ್ತುಶಿಲ್ಪದ ಸೌಂದರ್ಯವನ್ನೂ ಒಳಗೊಂಡಿವೆ. ಈ ತಾಲೂಕಿನ ಹಲವಾರು ವಾಸ್ತುಶಿಲ್ಪಗಳಿಗೆ ಸಾವಿರ ವರ್ಷಕ್ಕೂ ಹೆಚ್ಚಿನ ಭವ್ಯ ಇತಿಹಾಸವಿದೆ. ಕರ್ನಾಟಕ–ತಮಿಳುನಾಡು ವಾಸ್ತುಶಿಲ್ಪ ಪರಂಪರೆಯ ಸಂಯೋಗಶೈಲಿಯೂ ಇಲ್ಲಿ ದೊರೆಯುತ್ತದೆ. ನಂಜನಗೂಡು ಪರಿಸರದ ಹಲವು ಊರುಗಳ ಹೆಸರಿನ ಸಂಸ್ಕೃತೀಕರಣವನ್ನು ಇಲ್ಲಿಯೇ ಪ್ರಸ್ತಾಪಿಸಬಹುದು. ನಂಜನಗೂಡು–ಗರಳಪುರಿ, ಹುಲ್ಲಹಳ್ಳಿ–ತೃಣಪುರಿ, ಕಳಲೆ–ವೇಣುಪುರಿ, ಹೆಮ್ಮರಗಾಲ–ಮಣಿನಾಗಪುರಿ, ಸುತ್ತೂರು–ಶ್ರೋತ್ರಿಯೂರು–ಪ್ರದಕ್ಷಿಣಪುರಿ, ತಾಯೂರು–ಯಂತ್ರಪುರಿ–ಮಾತೃಪುರಿ ಹೆಡತಲೆ–ವಾಮಶಿರೋನಗರ ಹೀಗೆ ಬಹುಶಃ ೧೩–೧೪ನೇ ಶತಮಾನದಲ್ಲಿ ಈ ರೀತಿಯ ನಾಮಾಂಕಿತಗಳು ಹುಟ್ಟಿಕೊಂಡಿರುವ ಸಾಧ್ಯತೆ ಇದೆ. ಅಂಥ ಕೆಲವು ಮುಖ್ಯ ಸ್ಥಳಗಳ ಸಾಂಸ್ಕೃತಿಕ ಅವಲೋಕನವಿಲ್ಲಿದ್ದು, ಅವುಗಳನ್ನು 'ಅ'ಕಾರಾದಿಯಲ್ಲಿ ನಿರೂಪಿಸಲಾಗಿದ್ದು, ಕಂಸದಲ್ಲಿ ನೀಡಿರುವ ಸಂಖ್ಯೆಯು ೨೦೦೧ರ ಜನಗಣತಿಯನ್ನು ಆಧರಿಸಿದ ಆಯಾ ಸ್ಥಳದ ಜನಸಂಖ್ಯೆಯನ್ನು ಸೂಚಿಸುತ್ತದೆ.

**ಇಗ್ಗಲಿ (ಜೋಡಿಹರಿಹರಪುರ) (೯೩೧) :** ನಂಜನಗೂಡಿಗೆ ೧೦ ಕಿ.ಮೀ. ದೂರದಲ್ಲಿದ್ದು, ಗಂಗರ ಕಾಲಕ್ಕೆ ಸೇರಿದ ಸುಮಾರು ೯–೧೦ನೆಯ ಶತಮಾನದ ಎರಡು ಶಾಸನಗಳಲ್ಲಿವೆ. ಸೋಮೇಶ್ವರ ಗುಡಿ ಮುಂದಿರುವ ಶಾಸನ ಸತ್ಯವಾಕ್ಯ ಕೊಂಗುಣಿವರ್ಮನ ಆಳ್ವಿಕೆಯ ೨೨ನೇ ವರ್ಷದಲ್ಲಿ ನೀಡಲ್ಪಟ್ಟಿದ್ದು, ಉತ್ತಳ್ಳದ ಕೋಟೆಕಾಳಗದಲ್ಲಿ ನೊಳಂಬರೊಂದಿಗೆ ಕಾದಾಡುತ್ತ ಮಡಿದ ರಾಚೆಯಗಂಗನಿಗೆ ಕುಟ್ಟಾಣೆ ಪೆರ್ಮಡಿ ಹಾಗೂ ಎರೆಯಪ್ಪರು ಇಗ್ಗಲಿ ಹಾಗೂ ದುದುಗೆರೆಗಳನ್ನು ಕಲ್ನಾಡು ದತ್ತಿ ನೀಡಿದ್ದನ್ನು ದಾಖಲಿಸಿದೆ. ಒಂಭತ್ತನೆಯ ಶತಮಾನಕ್ಕೆ ಸೇರಿದ್ದ ಇನ್ನೊಂದು ಶಾಸನ ಪೃದುವಿಗಂಗನು ಮಾದಿಗೆರೆಯನ್ನು ಇಗ್ಗಲಿಯ ಗೋವುಗಳನ್ನು ರಕ್ಷಿಸಿದ ಮೂವರು ಗೌಡರಿಗೆ ಉಂಬಳಿ ನೀಡಿದ್ದನ್ನು ದಾಖಲಿಸುತ್ತದೆ.

**ಏಚಿಗನಹಳ್ಳಿ (೨೯೫೧) :** ಪ್ರಾಚೀನ ಶಾಸನಗಳಲ್ಲೂ ಏಚಿಗನಹಳ್ಳಿ ಎಂದೇ ಉಲ್ಲೇಖಿತಗೊಂಡಿರುವ ಇದು ನಂಜನಗೂಡಿನಿಂದ ೨೦ ಕಿ.ಮೀ. ದೂರದಲ್ಲಿದ್ದು, ಈವರೆಗೆ ಐದು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ಊರಾಚೆ ಸೋಮೇಶ್ವರ ಗುಡಿಯಲ್ಲಿರುವ ೧೧೧೪ರ ಶಾಸನ ಚೋಳಕುಲೋತ್ತುಂಗನ ಆಳ್ವಿಕೆಯಲ್ಲಿ ನಡೆದ ಭೂಮಾರಾಟವನ್ನು ದಾಖಲಿಸಿದರೆ, ನೇಮಿನಾಥ ಬಸದಿ ಬಯಲಲ್ಲಿರುವ ಸುಮಾರು ೧೪ನೇ ಶತಮಾನದ ಶಾಸನ, ನೇಮಿನಾಥಸ್ವಾಮಿಗೆ ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ಅಲ್ಲೇ ಇರುವ ೧೩೭೧ರ ಶಾಸನ, ಸಲ್ಲೇಖನ ಆಚರಿಸಿ ಮಡಿದ ಗುರು ಮೇಘಚಂದ್ರದೇವ ಕವಿಯ ನಿಷಿದಿಗೆಯನ್ನು ಶಿಷ್ಯ ಮಾಣಿಕ್ಯದೇವರು ನಿಲ್ಲಿಸಿದ್ದನ್ನು ದಾಖಲಿಸಿದೆ. ಈ ಶಿಲಾಲೇಖದ ಮೇಲ್ಭಾಗದ ಉಬ್ಬುಶಿಲ್ಪಗಳು ಮೇಘಚಂದ್ರ, ಮಾಣಿಕ್ಯ ದೇವರುಗಳದೆಂದು ಗೊತ್ತಾಗುತ್ತಿದೆ. ಬಸದಿ ದಕ್ಷಿಣಕ್ಕೆ ಹೊಳೆಮಧ್ಯದ ಬಂಡೆ ಮೇಲಿನ ಶಾಸನದಿಂದ (ಸುಮಾರು ೧೬ನೇ ಶತಮಾನ), ಕೋಟೆಯ ತಳವಾರ ಭೋಳ ಅವನ ತಾಯಿ ಅಕ್ಕಮ್ಮ ಹಾಗೂ ಕೇತಪ್ಪನ ಮಡದಿ ಚಾಡದೇವಿಯರು ಸತ್ತಾಗ, ಕಾಳಹಸ್ತಿಲಿಂಗವನ್ನು ಪ್ರತಿಷ್ಠಾಪಿಸಲ್ಪಟ್ಟಂತೆ ತೋರುತ್ತದೆ. ಇಲ್ಲಿರುವ ನೇಮಿನಾಥ ಬಸದಿಯು ಸುಮಾರು ೧೧–೧೨ನೇ ಶತಮಾನಕ್ಕೆ ಸೇರಿದ್ದೆಂದು ತರ್ಕಿಸಬಹುದಾಗಿದೆ. ಇತ್ತೀಚೆಗೆ ಈ ಬಸದಿಯು ಜೀರ್ಣೋದ್ಧಾರಗೊಂಡಿದೆ.

**ಕಣೆನೂರು (೫೩೫) :** ನಂಜನಗೂಡಿನಿಂದ ೧೨ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ಏಳು ಶಾಸನಗಳು ವರದಿಯಾಗಿವೆ. ಅವುಗಳಲ್ಲೊಂದರಲ್ಲಿ ಕರೆಗಾಡು–೨೦ರ ಉಲ್ಲೇಖವಿದೆ. ಇಲ್ಲಿರುವ ಎಂಟನೆಯ ಶತಮಾನದ ಎರಡು ಶಾಸನಗಳು ತ್ರುಟಿತವಾಗಿದ್ದರೆ, ೧೨ನೇ ಶತಮಾನದ ಶಾಸನ ನುಗುನಾಡ ರಘನಾಥಮಂಗಲವನ್ನು ಹೆಸರಿಸುತ್ತದೆ. ಗದ್ದೆಯೊಂದರಲ್ಲಿರುವ ೧೩೩೭ರ ಶಾಸನ, ಕಣೆಯಲೂರಲ್ಲಿ ಹಿಂದೆ ಘಟಾಂಟಕಿದೇವಿಯು ನಿರ್ಮಿಸಿದ್ದ, ಆದಿನಾಥ ಬಸದಿಯ ದಿವ್ಯತೀರ್ಥಕ್ಕೆ ಗೋಪಿನಾಥನು ದತ್ತಿಬಿಟ್ಟಿದ್ದನ್ನು ಹೇಳುವುದರ ಜೊತೆಗೆ ನಿರಗಿ ಮಾದರ ಹುಲ್ಲಿನಹಳ್ಳಿಯನ್ನೂ ಹೆಸರಿಸುತ್ತದೆ. ಶಾಸನೋಕ್ತ ಘಟಾಂಟಕಿದೇವಿಯೇ ಅತ್ತಿಮಬ್ಬೆ ಇರಬಹುದೆಂದು ವಿದ್ವಾಂಸರು ಅನುಮಾನಿಸಿದ್ದಾರೆ. ಇಲ್ಲಿಯ ಬಸವೇಶ್ವರ ಗುಡಿಯೇ ಜೈನಗುಡಿಯಾಗಿದ್ದಿರಬೇಕೆಂದು ಊಹಿಸಬಹುದಾಗಿದೆ. ಇಲ್ಲಿರುವ ೧೫೦೩ರ ಇನ್ನೊಂದು ಶಾಸನ, ಗಿರಿನಾಥ ದೇವರಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಇಲ್ಲಿ ಗಂಗ–ಹೊಯ್ಸಳ ವಿಜಯನಗರ ಕಾಲದ ಅವಶೇಷಗಳು ಅನಾಥವಾಗಿ ಬಿದ್ದಿವೆ.

**ಕಲ್ಕುಂದ (೧,೮೦೯) :** ನಂಜನಗೂಡಿನಿಂದ ೧೫ ಕಿ.ಮಿ. ಪೂರ್ವದಲ್ಲಿರುವ ಈ ಊರು 'ಕಲ್ಕುಂದ ಅಗ್ರಹಾರ' ಎಂದೇ ಇತಿಹಾಸ ಪ್ರಸಿದ್ಧವಾಗಿದ್ದು, ಕಲ್ಗುಂದದಿಂದ ಈವರೆಗೆ ಎಂಟು ಶಾಸನಗಳು ವರದಿಯಾಗಿವೆ. ಒಂದು ಶಾಸನ, ನಾರಾಯಣಸ್ವಾಮಿಗೆ ಎಡಕೊಳಗೇರಿಯ ದುಗ್ಗಯ್ಯ ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೆ, ಸೋಮೇಶ್ವರ ಗುಡಿ ಮುಂದಿರುವ ೧೦೧೭ರ ಶಾಸನ ಕಲ್ಕುಂದದ ಮಹಾಜನಗಳೂ. ಊರ ಮಹಾದೇವರು

ಹಾಗೂ ನಾರಾಯಣ ದೇವರ ನಂದಾದೀಪಕ್ಕೆಂದು ಭೂದಾನ ನೀಡಿದ್ದನ್ನು ದಾಖಲಿಸುತ್ತದೆ. ಅಲ್ಲೇ ಇರುವ ಇನ್ನೊಂದು ಶಾಸನ (ಸುಮಾರು ೧೧ನೇ ಶತಮಾನ) ಮೂಡಗೇರಿಯ ನಾಗಮಯ್ಯನು ಮಾಡಿಸಿದ ದೇಗುಲಕ್ಕೆ ಭೂದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಮಾರಿಗುಡಿ ಮುಂದಿರುವ ೧೨೪೧ರ ಶಾಸನ, ಹೊಯ್ಸಳ ಸೋಮೇಶ್ವರನ ಆಳ್ವಿಕೆಯಲ್ಲಿ ದೇವಾಲಯಕ್ಕೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೆ, ೧೫೨೭ರ ಇನ್ನೊಂದು ಶಾಸನ ಕೃಷ್ಣದೇವರಾಯನ ಆಳ್ವಿಕೆಯಲ್ಲಿ, ನಂಜುಂಡೇಶ್ವರ ದೇವರ ಸೇವೆಗೆಂದು ತಗಡೂರು ಸೀಮೆಗೆ ಸೇರಿದ ಕಲ್ಕುಂದ ಗ್ರಾಮವನ್ನು ಉಂಬಳಿ ಬಿಟ್ಟಿದ್ದನ್ನು ತಿಳಿಸುತ್ತದೆ. ಈ ಶಾಸನಗಳಿಂದ ಗಂಗರಷ್ಟು ಪುರಾತನವಾದ ಈ ಊರು ಒಂದು ಮುಖ್ಯ ಧಾರ್ಮಿಕ ಕೇಂದ್ರವಾಗಿತ್ತೆಂದು ತರ್ಕಿಸಬಹುದಾಗಿದೆ. ಇಲ್ಲಿನ ಸೋಮೇಶ್ವರ ದೇವಸ್ಥಾನವನ್ನು ೧೦ನೇ ಶತಮಾನದಲ್ಲಿ ಬಿದಿವಾರಯ್ಯ ಮತ್ತು ಮುದ್ದಯ್ಯ ಎಂಬ ಅಧಿಕಾರಿಗಳ ತಂದೆಯಾದ ನಾಗಮಯ್ಯನು ಕಟ್ಟಿಸಿದ್ದು ಈ ಅಧಿಕಾರಿಗಳು ಆ ದೇವಾಲಯಕ್ಕೆ ದತ್ತಿ ಬಿಟ್ಟಿರುವ ಉಲ್ಲೇಖವನ್ನು ಇಲ್ಲಿನ ಶಾಸನ ಹೇಳುತ್ತದೆ. ಊರಿನ ಬಳಿಯಿರುವ ಬೆಟ್ಟದಲ್ಲಿ ಕೇದಾರೇಶ್ವರ ಗುಡಿಯಿದೆ. ಊರಿನ ಸುತ್ತ ಹಲವು ಪ್ರಾಚ್ಯಾವಶೇಷಗಳು ದೊರೆಯುತ್ತವೆ.

**ಕಳಲೆ (೭,೨೭೮) :** ಇದು ನಂಜನಗೂಡಿನಿಂದ ನೈಋತ್ಯಕ್ಕೆ ಸುಮಾರು ಎಂಟು ಕಿ.ಮೀ. ದೂರದಲ್ಲಿರುವ ಇತಿಹಾಸ ಪ್ರಸಿದ್ಧ ಗ್ರಾಮ. ಇಲ್ಲಿಂದ ಈವರೆಗೆ ಒಂಭತ್ತು ಶಾಸನಗಳು ವರದಿಯಾಗಿವೆ. ಮೂರು ಘಟ್ಟಗಳಲ್ಲಿ ನಿರ್ಮಾಣವಾಗಿರುವಂತೆ ತೋರುವ ಇಲ್ಲಿನ ಲಕ್ಷ್ಮೀಕಾಂತ ದೇವಾಲಯವು ದ್ರಾವಿಡ ಶೈಲಿಯಲ್ಲಿದೆ. ದೇಗುಲದ ಗರ್ಭಗುಡಿ, ಸುಕನಾಸಿ, ನವರಂಗಗಳಲ್ಲಿ ಹೊಯ್ಸಳ ಶೈಲಿ ಗೋಚರವಾಗುತ್ತದೆ. ಗರ್ಭಗುಡಿಯಲ್ಲಿರುವ ಲಕ್ಷ್ಮೀಕಾಂತ ಅಥವಾ ನಾರಾಯಣ ವಿಗ್ರಹ ಮೂರು ಅಡಿ ಎತ್ತರದ ಸುಂದರ ಮೂರ್ತಿ. ದಶಾವತಾರದ ಉಬ್ಬು ಕೆತ್ತನೆಯುಳ್ಳ ಪ್ರಭಾವಳಿಯು ವಿಗ್ರಹಕ್ಕೆ ವಿಶೇಷ ಶೋಭೆಯನ್ನು ನೀಡಿದೆ. ನವರಂಗದ ದಕ್ಷಿಣದಲ್ಲಿ ಉತ್ಸವಮೂರ್ತಿಯ ಗುಡಿಯಿದೆ. ಪ್ರಾಕಾರದಲ್ಲಿ ಆಳ್ವಾರ್, ಹನುಮಾನ್, ವಿಶ್ವಕ್ಸೇನ, ಪರವಾಸುದೇವ ಹಾಗೂ ಲಕ್ಷ್ಮೀದೇವಿಯ ಗುಡಿಗಳಿವೆ.

ವಿಜಯನಗರದರಸರ ಕಾಲದಲ್ಲಿ ಶಿಥಿಲವಾಗಿದ್ದ ಈ ಗುಡಿಯನ್ನು ಕಾಂತಯ್ಯನೆಂಬುವನು ದುರಸ್ತಿ ಮಾಡಿದುದೇ ಅಲ್ಲದೆ ೧೨ ಅಂಕಣಗಳ ಹಜಾರವನ್ನು ನಿರ್ಮಿಸಿದನೆಂದೂ ತಿಳಿದುಬರುತ್ತದೆ. ಕ್ರಿ.ಶ. ೧೭೦೦ರಲ್ಲಿ ಸರ್ವಾಧಿಕಾರಿ ದಳವಾಯಿ ಚೆಲುವೇ ಅರಸು ೧೬ ಕಂಬಗಳಿರುವ ದಕ್ಷಿಣದ ಮುಖಮಂಟಪ ಮತ್ತು ೫೦ ಕಂಭಗಳ ಮಹಾಮಂಟಪವನ್ನು ಕಟ್ಟಿಸಿ ಮಹಾದ್ವಾರ ಮತ್ತು ಗೋಪುರಗಳನ್ನೂ ನಿರ್ಮಿಸಿದ್ದಾನೆ.

ದೇಗುಲದ ಕಂಬಗಳ ಮೇಲಿರುವ ಭಕ್ತ, ಜಟ್ಟಿ, ವಾದ್ಯಗಾರರ ಉಬ್ಬುಶಿಲ್ಪಗಳು; ಭಿತ್ತಿಯ ಮೇಲಿನ ಹಾರದಲ್ಲಿನ ರಂಗನಾಥ ಹಾಗೂ ಸೇವೆ ಸಲ್ಲಿಸುತ್ತಿರುವ ಗಡ್ಡದಾರಿ ಋಷಿಗಳ ಶಿಲ್ಪಗಳು ಗಮನ ಸೆಳೆಯುತ್ತವೆ. ಹಾಗೆಯೇ ದೇಗುಲದ ಪ್ರಾಕಾರದ ಹಾರ,

ಕೋಷ್ಠಗಳಲ್ಲಿರುವ ಆಳ್ವಾರರು, ಪರವಾಸುದೇವ, ಶ್ರೀದೇವಿ, ಭೂದೇವಿ, ಪಟ್ಟಾಭಿರಾಮ, ಚತುರ್ಭುಜ ವೇಣುಗೋಪಾಲ, ಕೋದಂಡರಾಮ, ವಿಷ್ಣು ಅವತಾರ ಮುಂತಾದ ಉಬ್ಬುಶಿಲ್ಪಗಳು ೧೮ನೇ ಶತಮಾನದ ಮೈಸೂರು ಶೈಲಿಯ ಪ್ರಧಾನ ಲಕ್ಷಣಗಳನ್ನು ಪ್ರತಿನಿಧಿಸುತ್ತವೆ.

ಈ ಆಲಯದ ಲೋಹಶಿಲ್ಪಗಳಲ್ಲಿ 'ಕೋದಂಡರಾಮ ಲಕ್ಷ್ಮಣ ಸೀತಾ' ವಿಗ್ರಹವು ದಳವಾಯಿ ಕಳಲೆ ದೇವರಾಜಯ್ಯನಿಂದ ಪೂಜಿತವಾಗುತ್ತಿದ್ದು ಅವನ ಮರಣಾನಂತರ ದೇವಾಲಯಕ್ಕೆ ಸೇರಿತೆಂದು ಹೇಳಲಾಗುತ್ತದೆ. ಇಲ್ಲಿನ ಉತ್ಸವಮೂರ್ತಿ, ಶ್ರೀದೇವಿ–ಭೂದೇವಿ, ನಂಬಿನಾರಾಯಣರ ವಿಗ್ರಹಗಳು ವಿಜಯನಗರ ಕಾಲದ ಕಂಚಿನಮೂರ್ತಿಯ ಲಕ್ಷಣವನ್ನು ಹೊಂದಿವೆ. ಇವುಗಳನ್ನು ಕಳಲೆ ವಂಶದ ಮೂಲಪುರುಷರಾದ ಕಾಂತ ಮತ್ತು ಕೃಷ್ಣರು ವಿಜಯನಗರದಿಂದ ತಂದರೆಂಬ ನಂಬಿಕೆ ಇದೆ.

ಈ ದೇಗುಲದ ಬಿರುದಾವಳಿಗಳನ್ನು ಕಳಲೆ ನಂಜರಾಜಯ್ಯ ನೀಡಿರುವನೆಂಬುದನ್ನು 'ಕೊಮಾರ ನಂಜರಾಜಯ್ಯನವರ ಶಾವೆ' ಎಂಬ ಬರಹ ದೃಢಪಡಿಸುತ್ತದೆ. ಹಾಗೇ ಬೆಳ್ಳಿಬಟ್ಟಲು, ದೊಡ್ಡ ಬೆಳ್ಳಿತಟ್ಟೆಗಳ ಮೇಲೆ 'ಟಿಪ್ಪು ಸುಲತಾನ ಪಾದಶಾರ ಧರ್ಮ' ಎಂಬ ಬರಹ ಇದೆ. ದಳವಾಯಿ ನಂಜರಾಜೆ ಅರಸ್, ಚೆಲುವೆ ಅರಸು, ಮಹಾಮಾತೆ ಲಕ್ಷ್ಮಮ್ಮಣ್ಣಿಯವರು ನೀಡಿರುವ ಬೆಳ್ಳಿವಸ್ತುಗಳು, ಕಂಚಿನ ಘಂಟೆಗಳು ಇಲ್ಲಿವೆ. ಈ ದೇಗುಲದ ಹೊರಭಾಗದಲ್ಲಿರುವ ನವರಾತ್ರಿ ಮಂಟಪ, ಕೃತ್ತಿಕೋತ್ಸವ ಮಂಟಪ ಮತ್ತು ವಸಂತಮಂಟಪಗಳ ವಿಸ್ತಾರ, ವೈಶಾಲ್ಯಗಳು ಮನಸೆಳೆಯುತ್ತವೆ. ಚೈತ್ರಮಾಸದಲ್ಲಿ ನಡೆಯುವ 'ಲಕ್ಷ್ಮೀಕಾಂತ' ಜಾತ್ರೆಯ ವೈಭವ ಅತ್ಯಾಕರ್ಷಕ.

ಇಲ್ಲಿನ ಮತ್ತೊಂದು ಹೆಸರಾಂತ ಗುಡಿ 'ಕೈವಲ್ಯದೇವಿ ದೇವಸ್ಥಾನ'. ವಿಜಯನಗರ ಶೈಲಿಯ ಈ ದೇವಸ್ಥಾನದಲ್ಲಿ ಗರ್ಭಗೃಹ, ಎತ್ತರದ ಕಂಭಗಳ ದೊಡ್ಡ ಹಜಾರ ಮತ್ತು ವಿಶಾಲವಾದ ಒಳಪ್ರಾಕಾರಗಳಿವೆ. ಈಚೆಗೆ ಜೀರ್ಣೋದ್ಧಾರಗೊಂಡಿರುವ ಈ ದೇವಾಲಯದಲ್ಲಿ ನಡೆಯುವ 'ಮಡೆ ಉತ್ಸವ' ಪ್ರಸಿದ್ಧವಾಗಿದೆ.

ಕಳಲೆಯ 'ಸೋಮೇಶ್ವರನ ಗುಡಿ' ಕೂಡ ವಿಜಯನಗರ ಶೈಲಿಯ ದೊಡ್ಡ ದೇವಾಲಯ. ಇದಕ್ಕೆ ಗರ್ಭಗೃಹ, ಜೀರ್ಣೋದ್ಧಾರಗೊಂಡಿರುವ ಶಿಖರ ಮತ್ತು ಅರ್ಧಮಂಟಪಗಳಿವೆ. ನವರಂಗದ ಕಂಬಗಳು ಬೃಹತ್ತಾಗಿವೆ. ಪಕ್ಕದಲ್ಲಿ ಅಮ್ಮನವರ ಗುಡಿ ಇದೆ. ಗರ್ಭಗೃಹದ ಮುಂದಿರುವ ವಿಶಾಲವಾದ ಹಜಾರದ ಕಂಬಗಳಲ್ಲಿನ ಕೆತ್ತನೆ ಸ್ಫುಟವಾಗಿದೆ. ಹಿಂದಿನ ಪ್ರಾಕಾರದುದ್ದಕ್ಕೂ ಇರುವ ಸಣ್ಣ ಗುಡಿಗಳಲ್ಲಿ ಶಿವಲಿಂಗಗಳಿವೆ. ಈ ಪುಟ್ಟ ಗುಡಿಗಳ ದ್ವಾರದಲ್ಲಿರುವ ಶಿವಪುರಾಣದ ಪ್ರಸಂಗಗಳ ಸೂಕ್ಷ್ಮಕೆತ್ತನೆ ಗಮನ ಸೆಳೆಯುತ್ತದೆ.

ಇಲ್ಲಿಯ ರೇವಣಸಿದ್ಧೇಶ್ವರ ಗುಡಿಯ ಮೂಲವಿಗ್ರಹ ಕಾಣೆಯಾಗಿದೆ. ಗ್ರಾಮಚಾವಡಿಯ ಎದುರಿನಲ್ಲಿರುವ ಇಟ್ಟಿಗೆ ಮಾಳಿಗಮ್ಮನ ಗುಡಿ, ಅರಸು ಮನೆತನದ

ಸೊಸೆಯ 'ಮಹಾಸತಿ'ತ್ವಕ್ಕೆ ಸಾಕ್ಷಿಯಾಗಿದೆ. ಕಳಲೆಗೆ ಕೋಟೆ ಇದ್ದುದರ ಗುರುತಿಗೆ ಕಲ್ಲಿನ ಚೌಕಟ್ಟಿನ ಮಂಟಪವು ಉಳಿದಿದ್ದು ಇದರ ಹಿಂದೆ ಕೋಟೆ ಗಣಪತಿ ಹಾಗೂ ಕೋಟೆ ಆಂಜನೇಯ ಗುಡಿಗಳಿವೆ. ೧೬೬೨ರಲ್ಲಿ ಹುರದ ರಾಜಕುಮಾರಿ ಅಮೃತಮ್ಮ ಕಳಲೆಯಲ್ಲಿ ವೀರಶೈವಮಠವೊಂದನ್ನು ಕಟ್ಟಿಸಿದ ಬಗೆಗೆ ಶಾಸನೋಲ್ಲೇಖವಿದೆ. ಆದರೆ ಆ ಮಠವಿಂದು ಉಳಿದಿಲ್ಲ.

**ಕಾಟೂರು (ಜೋಡಿ) (೨,೧೩೦) :** ಇದು ಹುಲ್ಲಹಳ್ಳಿಯಿಂದ ಸುಮಾರು ಹತ್ತು ಕಿ.ಮೀ.ಪಶ್ಚಿಮಕ್ಕೆ ಇರುವ ಚಿಕ್ಕ ಜೋಡಿಗ್ರಾಮ. ಇಲ್ಲಿನ ಸೋಮೇಶ್ವರ ದೇವಾಲಯದ ಭಿತ್ತಿಯ ಅಡ್ಡಪಟ್ಟಿಯ ಮೇಲಿರುವ ಶಾಸನ ಈ ದೇವಾಲಯವನ್ನು ಕ್ರಿ.ಶ. ೧೧೯೮ರಲ್ಲಿ, ನುಗುನಾಡಿಗೆ ಸೇರಿದ ಕಾಟೂರಿನ ಆರಿದರ, ಕೊಲದಮ ಮತ್ತು ತಮುಕ ಎಂಬುವವರು ಕಟ್ಟಿಸಿದರೆಂದು ಹೇಳುತ್ತದೆ. ಇವು ವ್ಯಕ್ತಿನಾಮ ಅಥವಾ ಪಂಗಡಗಳನ್ನು ಸೂಚಿಸಬಹುದೆಂದು ತೋರುತ್ತದೆ. ಈ ದೇವಾಲಯವನ್ನು ನಿರ್ಮಿಸಿದ ಆಚಾರಿ ಹಾಗೂ ಬೋವಿಗಳ ಹೆಸರೂ ಶಾಸನದ ಕೊನೆಯಲ್ಲಿದೆ. ಸಂಪೂರ್ಣವಾಗಿ ಬಳಪದ ಕಲ್ಲಿನಿಂದ ನಿರ್ಮಿತವಾಗಿರುವ ಈ ದೇಗುಲದಲ್ಲಿ ಕಿರಿದಾದ ಗರ್ಭಗೃಹ ಮತ್ತು ಸುಕನಾಸಿಗಳು ಮಾತ್ರ ಉಳಿದಿದ್ದು, ನವರಂಗ ಸಂಪೂರ್ಣ ನಾಶವಾಗಿದೆ. ಹಿಂದೆ ನವರಂಗದ ದ್ವಾರವಾಗಿದ್ದ ಗಜಲಕ್ಷ್ಮಿಯ ಚಿತ್ರವಿರುವ ತೊಲೆ ಅಲ್ಲೇ ಬಿದ್ದಿದೆ. ಇಲ್ಲಿನ ಮಾಹೇಶ್ವರಿ, ವಿಷ್ಣು, ಗಣೇಶ, ಕಂಕಾಳಮೂರ್ತಿಗಳು ಗಮನ ಸೆಳೆಯುತ್ತವೆ.

ದೇವಾಲಯದ ಅಧಿಷ್ಠಾನ ಸರಳವಾದ ಕೆಲವು ದಿಂಡುಗಳನ್ನು ಹೊಂದಿದ್ದು, ಈಗ ಅವು ಸಂಪೂರ್ಣ ಮಣ್ಣಿನಲ್ಲಿ ಹೂತುಹೋಗಿವೆ. ಹೀಗಾಗಿ ದೇವಾಲಯ ತುಂಬಾ ಚಿಕ್ಕದಾಗಿ ತೋರುತ್ತದೆ. ಗರ್ಭಗೃಹದ ಗೋಡೆಯಲ್ಲಿ ತೆಳುವಾದ ಅರೆಗಂಬಗಳಿದ್ದು ಪ್ರತಿಯೊಂದರ ಮೇಲೂ ಬೋದಿಗೆ, ಚಾಚುಪೀಠಗಳಿವೆ. ಮೇಲ್ಭಾಗದ ಸಣ್ಣ ಕಪೋತದ ಮೇಲೆ ಸೂಕ್ಷ್ಮ ಅಲಂಕರಣಗಳು ಕಾಣುತ್ತವೆ. ಸುಕನಾಸಿಯ ಹೊರಗೋಡೆಯಲ್ಲಿ ಅಲಂಕಾರಿಕ ಅರೆಗಂಬಗಳನ್ನು ಕಾಣಬಹುದು. ಹೊಯ್ಸಳರ ಕಾಲದ ಈ ದೇವಾಲಯವು ಕದಂಬ–ನಾಗರ ಶೈಲಿಯ ಶಿಖರವನ್ನು ಹೊಂದಿದೆ. ದೇವಾಲಯದ ಮೇಲಿನ ಕೈಪಿಡಿ ಗೋಡೆ ಮತ್ತು ವಿಮಾನವನ್ನು ಈಚೆಗೆ ಇಟ್ಟಿಗೆ ಗಾರೆಯಿಂದ ಹಿಂಬದಿಯಲ್ಲಿ ನಿರ್ಮಿಸಲಾಗಿದೆಯಾದರೂ ಮೂಲತ: ಈ ದೇಗುಲಕ್ಕೆ ಕದಂಬನಾಗರ ಶೈಲಿಯ ಬಳಪದ ಕಲ್ಲಿನ ವಿಮಾನ ಇತ್ತು ಎಂಬುದಕ್ಕೆ ಅಲ್ಲೇ ಸಾಕ್ಷಿಯಿದೆ. ದೇವಾಲಯದ ಶಿಖರದ ದಿಂಡುಕಲ್ಲುಗಳನ್ನು ಅದೇ ಆಕಾರದಲ್ಲಿ ಜೋಡಿಸಿರುವುದರಿಂದ ಅದರ ಮೂಲ ಸ್ವರೂಪವನ್ನು ಅರಿಯಬಹುದು. ಶಿಖರದ ಅಡ್ಡದಿಂಡುಗಳ ಮೇಲೆ ಸೂಕ್ಷ್ಮ ಅಲಂಕಾರವಿದ್ದು, ತುದಿಯಲ್ಲಿ ಮಗುಚಿದ ಕಮಲಾಕಾರದ ಕಳಶವಿದೆ. ಶಿಖರದ ನಾಲ್ಕೂ ಕಡೆಯ ಮಧ್ಯಭಾಗದಲ್ಲಿ ಹೊಯ್ಸಳ ಶೈಲಿಯ ಕೀರ್ತಿಮುಖದ ಅಲಂಕಾರವಿದೆ. ಎಂ.ಎಸ್. ಕೃಷ್ಣಮೂರ್ತಿ ಅವರು ಇದರ ಬಗ್ಗೆ ಚರ್ಚಿಸುತ್ತಾ 'ಹೊಯ್ಸಳ ಕಾಲದ ಕದಂಬ–ನಾಗರ ಶಿಖರವೊಂದು ಈ ಸ್ಥಳದಲ್ಲಿ ಕಂಡುಬಂದಿರುವುದು ನಿಜಕ್ಕೂ

ಆಶ್ಚರ್ಯಕರವಾದದ್ದು. ಉತ್ತರ ಕನ್ನಡ ಮತ್ತು ಅದರ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಈ ರೀತಿಯ ಶಿಖರ ಹೆಚ್ಚಾಗಿ ಪ್ರಚಲಿತದಲ್ಲಿತ್ತು. ಆ ಹಿನ್ನೆಲೆಯಲ್ಲಿ ಜೋಡಿಕಾಟೂರಿನ ಈ ಕದಂಬನಾಗರ ಶಿಖರ ಪ್ರಾಯಶ: ಕದಂಬನಾಗರ ಸಂಪ್ರದಾಯದ ಅತ್ಯಂತ ದಕ್ಷಿಣಮಿತಿ ಎನ್ನಬಹುದು' ಎಂದು ಹೇಳುತ್ತಾರೆ.

**ಕಾರ್ಯ (೨,೪೨೦) :** ನಂಜನಗೂಡಿನಿಂದ ಸುಮಾರು ೨೨ ಕಿ.ಮೀ.ದೂರವಿರುವ 'ಕಾರ್ಯ'ವು ಗಂಗದೊರೆ ಸತ್ಯವಾಕ್ಯ ಪೆರ್ಮಾಡಿಯ ಅವಧಿಯಲ್ಲಿ ೭೦ ಹಳ್ಳಿಗಳ ಮುಖ್ಯಸ್ಥಳವಾಗಿ 'ಕಾರ್ಯನಾಡು' ಎಂದು ಗುರುತಿಸಿಕೊಳ್ಳುತ್ತಿತ್ತು. ಇಲ್ಲಿಂದ ಈವರೆಗೆ ವರದಿಯಾಗಿರುವ ಆರು ಶಾಸನಗಳಲ್ಲಿ ೯೬೪ರ ಶಾಸನ ನಾಗವರ್ಮನು ಕಟ್ಟಿಸಿದ ದೇವಿಗೆರೆ ಹಾಗೂ ಹಿರಿಯ ಕೆರೆಗಳಿಗೆ ಬಿತ್ತುವಟ್ಟವನ್ನು ಬಿಟ್ಟುಕೊಟ್ಟಿದ್ದನ್ನು ತಿಳಿಸುತ್ತದೆ. ಜೀರಿಗದ್ದೆ ಬಳಿಯಿರುವ ಸುಮಾರು ೧೨ನೇ ಶತಮಾನಕ್ಕೆ ಸೇರಿದ ಎರಡು ವೀರಗಲ್ಲು ಶಾಸನಗಳು ಕೋಟೆಕಾಳಗದಲ್ಲಿ ಮಡಿದ ವೀರರಿಗಾಗಿ ವೀರಗಲ್ಲು ನಿಲ್ಲಿಸಿದ್ದನ್ನು ದಾಖಲಿಸುತ್ತವೆ. ಊರಿನ ಪೂರ್ವದಲ್ಲಿರುವ ಸಿದ್ಧೇಶ್ವರ ಬೆಟ್ಟ ಊರಿಗೆ ಅಪೂರ್ವ ಮಹತ್ವವನ್ನು ಕಲ್ಪಿಸಿದೆ. ಅಲ್ಲೂ ಸುಮಾರು ೧೪–೧೬ನೇ ಶತಮಾನದ ಎರಡು ಶಾಸನಗಳಿವೆ. ಬೆಟ್ಟದ ಮೇಲಿರುವ ಸಿದ್ಧೇಶ್ವರ ಗುಡಿಯು ಗಂಗಕಾಲದ ಚಿಕ್ಕ ದೇವಸ್ಥಾನ. ಅಲ್ಲಿರುವ ಸಿದ್ಧೇಶ್ವರ ವಿಗ್ರಹವೂ ವಿಶಿಷ್ಟವಾದುದು. ಗಂಗಶೈಲಿಯ ಈ ವಿಗ್ರಹವು ಒಂದು ಮೀಟರ್ ಎತ್ತರವಿದ್ದು ಕಮಲದ ಮೇಲೆ ಕುಳಿತ ಭಂಗಿಯಲ್ಲಿದೆ. ಅಷ್ಟಬಾಹುಗಳಲ್ಲಿ ಡಮರು, ಕತ್ತಿ, ತ್ರಿಶೂಲ, ಕಪಾಲ, ಬಿಲ್ಲು, ದಂಡ ಮುಂತಾದ ಆಯುಧಗಳಿವೆ. ಪ್ರಾಕಾರದಲ್ಲಿ ಕಾಳಿ ಮತ್ತು ಬ್ರಾಹ್ಮಿಯರ ವಿಗ್ರಹಗಳನ್ನು ನೋಡಬಹುದು. ಇಲ್ಲಿಯೇ ಬಸವೇಶ್ವರ ಮತ್ತು ಮಾರ್ಕಂಡೇಶ್ವರರ ಗುಡಿಗಳೂ ಇವೆ. ಇವುಗಳಲ್ಲಿ ಬಸವೇಶ್ವರ ಗುಡಿಯು ಚಿಕ್ಕದಾದರೂ ಗಂಗಶೈಲಿಯ ಸುಂದರವಾದ ದೇವಾಲಯ.

**ತಗಡೂರು (೭,೨೮೦) :** ನಂಜನಗೂಡಿನಿಂದ ೧೪ ಕಿ.ಮೀ.ದೂರದಲ್ಲಿರುವ ಇದನ್ನು ತಗಡೂರು ಸ್ಥಳ, ಹಿರಿಯ ಮಹಾನಾಡು ಎಂದೆಲ್ಲಾ ಶಾಸನಗಳು ಉಲ್ಲೇಖಿಸಿವೆ. ಇಲ್ಲಿಂದ ಈವರೆಗೆ ೧೬ ಶಾಸನಗಳು ವರದಿಯಾಗಿವೆ. ಇಲ್ಲಿಯ ಮೂಲಸ್ಥಾನೇಶ್ವರ, ಲಕ್ಷ್ಮೀನಾರಾಯಣಸ್ವಾಮಿ ಹಾಗೂ ಅಂಕನಾಥೇಶ್ವರ ದೇವಾಲಯಗಳು ತುಂಬಾ ಪ್ರಾಚೀನವಾದವು. ಮೂಲಸ್ಥಾನೇಶ್ವರ ಗುಡಿಯು ಗಂಗಶೈಲಿಯದಾಗಿದ್ದು ಈಗ ಪೂರ್ಣ ಶಿಥಿಲವಾಗಿದೆ. ಗರ್ಭಗೃಹ ಮತ್ತು ನವರಂಗಗಳು ಪೂರ್ಣವಾಗಿ ಕುಸಿದುಹೋಗಿರುವುದರಿಂದ ಮೂಲಸ್ಥಾನೇಶ್ವರ ಲಿಂಗವನ್ನು ಮುಖಮಂಟಪದಲ್ಲಿಯೇ ಇರಿಸಿ ಪೂಜಿಸಲಾಗುತ್ತಿದೆ. ಈ ಲಿಂಗವೂ ದಿವ್ಯಲಿಂಗವಾಗಿದ್ದು, ದಿವ್ಯಪರೀಕ್ಷೆ ಅನುಸರಿಸಿ ನ್ಯಾಯ ವಿತರಣೆ ಮಾಡಲಾಗುತ್ತಿತ್ತೆಂಬುದಕ್ಕೆ ಈ ಶಾಸನದಲ್ಲಿ ಸುಳಿವಿದೆ. ಅಲ್ಲಿಯೇ ಸ್ಥಾನಿಕ ಭಂಗಿಯ ವಿಷ್ಣು ವಿಗ್ರಹವಿದ್ದು ಶಿಲ್ಪಶೈಲಿಯಿಂದ ಅದನ್ನು ಚೋಳ ಕಾಲದ್ದೆಂದು ಗುರುತಿಸಬಹುದಾಗಿದೆ. ಮುಖ್ಯಗುಡಿಯ ಎಡಭಾಗದಲ್ಲಿದ್ದ ಪಾರ್ವತಿ ಗುಡಿಯು ಸಂಪೂರ್ಣ ಬಿದ್ದುಹೋಗಿದ್ದು, ಪಾರ್ವತಿ ವಿಗ್ರಹವೂ ಕಣ್ಮರೆಯಾಗಿದೆ.

ಲಕ್ಷ್ಮೀನಾರಾಯಣಸ್ವಾಮಿ (ಶಾಸನೋಕ್ತ ಲಕ್ಷ್ಮೀಕಾಂತ) ದೇವಸ್ಥಾನವು ಬೃಹತ್ತಾದ ರಚನೆಯಾಗಿದ್ದು, ಹೊಯ್ಸಳ ಶೈಲಿಯ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಒಂದು ಮೀಟರ್ ಎತ್ತರದ ನಾರಾಯಣ ವಿಗ್ರಹವು ಸುಂದರವಾಗಿದ್ದು ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ನವರಂಗದ ಮುಂದಿನ ಮುಖಮಂಟಪವು ವಿಜಯನಗರ ಶೈಲಿಯ ಇಪ್ಪತ್ನಾಲ್ಕು ಕಂಬಗಳ ಬೃಹತ್ ರಚನೆಯಾಗಿದೆ. ಮುಖ್ಯದ್ವಾರವು ವಿಜಯನಗರ ಶೈಲಿಯ ರಾಜಗೋಪುರವನ್ನು ಹೊಂದಿದ್ದು ಈಗ ಕುಸಿದಿದೆ. ಧರ್ಮಸ್ಥಳದ ಹೆಗ್ಗಡೆಯವರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸುವಲ್ಲಿ ನೆರವು ನೀಡಿದ್ದಾರೆ. ಮುಖ್ಯದ್ವಾರದ ಪೂರ್ವದಲ್ಲಿ ದೊಡ್ಡದಾದ ಕಲ್ಯಾಣಮಂಟಪವಿದೆ. ಇಲ್ಲಿಯ ಅಂಕನಾಥೇಶ್ವರ ಗುಡಿಯು ಅಂಕಪ್ಪದೇವರಸ ಎಂಬ ಅಧಿಕಾರಿಯಿಂದ ನಿರ್ಮಿತವಾಗಿದೆ. ಇದಕ್ಕೆ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿವೆ. ದಕ್ಷಿಣಮೂರ್ತಿ, ಸಾಂಬಶಿವ, ಸೂರ್ಯನಾರಾಯಣ, ಭೈರವ, ರೇವಂತ ಮುಂತಾದ ಚೋಳ ಶೈಲಿಯ ವಿಗ್ರಹಗಳು ನವರಂಗದಲ್ಲಿವೆ. ಮುಖ್ಯ ಗರ್ಭಗೃಹದಲ್ಲಿ ಸಿದ್ಧೇಶ್ವರ ಲಿಂಗ ಮತ್ತು ಬಲಭಾಗದ ಚಿಕ್ಕಗುಡಿಯಲ್ಲಿ ವೀರಭದ್ರನ ವಿಗ್ರಹಗಳೂ ಇವೆ. ಈ ವೀರಭದ್ರನನ್ನು ಸ್ಥಳೀಯರು ಅಂಕನಾಥ ಎಂದು ಕರೆಯುತ್ತಾರೆ. ಇಲ್ಲಿನ ಮತ್ತೊಂದು ಪ್ರಮುಖ ವಾಸ್ತುವೆಂದರೆ ಆದಿನಾಥನ ಬಸದಿ. ಗಂಗಕಾಲದ ಈ ಬಸದಿಯಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಖಮಂಟಪಗಳಿವೆ. ಆದಿನಾಥ ವಿಗ್ರಹವು ತುಂಬ ಸುಂದರವಾಗಿದೆ. ನಿಸಿಧಿ ಶಾಸನವಲ್ಲದೆ, ಚೌಡೇಶ್ವರಿ, ಬೆಣಚುಕಲ್ಲೇಶ್ವರ, ಶನೀಶ್ವರ ಮುಂತಾದ ಗುಡಿಗಳಿಲ್ಲಿವೆ. ಸ್ವಾತಂತ್ರ್ಯ ಹೋರಾಟಗಾರ ತಗಡೂರು ರಾಮಚಂದ್ರರಾಯರಿಂದ ರೂಪುಗೊಂಡಿರುವ 'ಗಾಂಧೀ ಆಶ್ರಮ'ವು ಗಾಂಧೀಜಿಯವರು ೧೯೩೨ರಲ್ಲಿ ತಗಡೂರಿಗೆ ಭೇಟಿ ನೀಡಿದ್ದನ್ನು ನೆನಪಿಸುವ ಸ್ಮಾರಕವಾಗಿ ಉಳಿದಿದೆ.

**ತಾಯೂರು (೩,೧೭೬)** : ನಂಜನಗೂಡಿನಿಂದ ಸುಮಾರು ೩೦ ಕಿ.ಮೀ. ದೂರದಲ್ಲಿ ಕಪಿಲ ದಂಡೆಯ ಮೇಲಿರುವ ಚಾರಿತ್ರಿಕ ಸ್ಥಳವಾಗಿದ್ದು, ಇದನ್ನು ತಿರುಮಕೂಡಲು ನರಸೀಪುರದಿಂದಲೂ ತಲುಪಬಹುದಾಗಿದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ಆರು ಶಾಸನಗಳಲ್ಲಿ ಎರಡು ಗಂಗರಿಗೂ, ಒಂದು ಹೊಯ್ಸಳರಿಗೂ ಹಾಗೂ ಉಳಿದ ಮೂರು ೧೪–೧೬ನೇ ಶತಮಾನಕ್ಕೂ ಸೇರಿವೆ. ಕೋಟೆ ಬಾಗಿಲ ಹನುಮಂತಗುಡಿ ಪಾಳು ನಿವೇಶನದಲ್ಲಿರುವ ಒಂಭತ್ತನೆಯ ಶತಮಾನಕ್ಕೆ ಸೇರಿದ ಶಾಸನ ನೀತಿಮಾರ್ಗ ಪೇರ್ಮಾನಡಿಯ ಉಲ್ಲೇಖವನ್ನು ಹೊಂದಿದ್ದು ವಿವರ ಹಾಳಾಗಿದ್ದರೆ, ಸ್ನಾನಘಟ್ಟದ ಬಳಿಯಿರುವ ೧೦ನೇ ಶತಮಾನದ ಶಾಸನ, ಮಾರಮ್ಮಯ್ಯನ ಮಡದಿ ಮಾರಬ್ಬೆಯು ಸನ್ಯಾಸನ ವೃತ ಕೈಗೊಂಡು ಗತಿಸಿದ್ದನ್ನು ದಾಖಲಿಸುತ್ತದೆ. ಇದರಿಂದ ಹಿಂದೆ ತಾಯೂರು ಜೈನಕೇಂದ್ರವಾಗಿತ್ತೆಂದು ತರ್ಕಿಸಬಹುದಾಗಿದೆ. ಇಲ್ಲಿಯ ವರದರಾಜಸ್ವಾಮಿ ಗುಡಿ ಉತ್ತರಕ್ಕೆ ಇರುವ ೧೨೮೫ರ ಶಾಸನ, ಮುಮ್ಮಡಿ ನರಸಿಂಹನ ಆಳ್ವಿಕೆಯಲ್ಲಿ ಪೆರುಮಾಳದಂಡನಾಯಕ, ಕೇತಿಶೆಟ್ಟಿ, ನಿಲುಗುಂದದ ಪಟ್ಟಣಸ್ವಾಮಿ ಚೌಂಡಿಸೆಟ್ಟಿ ಮುಂತಾದವರ ಧರ್ಮಕಾರ್ಯವನ್ನು ದಾಖಲಿಸಿದೆಯಾದರೂ, ಶಾಸನ ಹಾಳಾಗಿದ್ದು,

ವಿವರ ಸಿಗುತ್ತಿಲ್ಲ. ಹೊಳೆ ಬಾಗಿಲಲ್ಲಿರುವ ಸುಮಾರು ೧೪ನೆಯ ಶತಮಾನದ ವೀರಗಲ್ಲು, ನಂದನು ಕುಪ್ಪಗಲ್ಲ (ಇಂದಿನ ಕುಪ್ಪೇಗಾಲ) ಗಡಿಗದ್ದಲದಲ್ಲಿ ಮಡಿದಾಗ, ಗಂಗೆಯ ದಂಡನಾಯಕನು ಈ ಕಲ್ಲನ್ನು ನಿಲ್ಲಿಸಿದ್ದನ್ನು ದಾಖಲಿಸುತ್ತದೆ.

ಕೋಟೆಯ ತೃಣೇಶ್ವರಗುಡಿಯ ದಕ್ಷಿಣ ಪ್ರಾಕಾರದಲ್ಲಿರುವ ೧೫೮೬ರ ಶಾಸನ ವೆಂಕಟಪತಿರಾಯನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರ ತಿರುಮಲರಾಜನು, ಹದಿನಾಡ ರಾಮರಾಯನಾಯಕನಿಗೆ, ಪಲ್ಲಕ್ಕಿ ಕೊಡುಗೆಯಾಗಿ, ಮೂಗೂರು ಸೀಮೆ ತಾಯೂರು ಸ್ಥಳದ ತಾಯೂರು, ಈಶ್ವರಗೊಂಡಹಳ್ಳಿ, ಡಣಾಯಕಫರ ವೋಟುಹಾಳು (ವಾಟಾಳು), ಪುರ, ಗಣಿಗನೂರು, ಆಲದೂರು, ಗೆಜೆಗನಪುರ ಮುಂತಾದ ೧೫ ಗ್ರಾಮಗಳಲ್ಲಿಯ ಉಭಯ ಮಾರ್ಗದ ಸುಂಕವನ್ನು ದತ್ತಿಬಿಟ್ಟಿದ್ದನ್ನು ದಾಖಲಿಸಿದೆ. ಈ ಶಾಸನದಿಂದ ಹಿಂದೆ ತಾಯೂರು, ಮೂಗೂರು ಸೀಮೆಗೆ ಸೇರಿದ ಸ್ಥಳ ಎಂಬ ವಿಭಾಗದ ಕೇಂದ್ರಸ್ಥಾನವಾಗಿದ್ದ ಅಂಶ ವೇದ್ಯವಾಗುತ್ತದೆ. ಅಲ್ಲದೆ ಹಿಂದೆ ನರಸೀಪುರ ತಾಲೂಕಿನ ಒಂದು ಹೋಬಳಿಯೂ ಆಗಿದ್ದ ಇದನ್ನು ೧೮೮೨ರಲ್ಲಿ ನಂಜನಗೂಡು ತಾಲೂಕಿಗೆ ವರ್ಗಾಯಿಸಲಾಗಿತ್ತು. ಹೀಗೆ ಹಿಂದೆ ಆಡಳಿತಾತ್ಮಕ ಮಹತ್ವವನ್ನು ಹೊಂದಿದ್ದ ತಾಯೂರಿನಲ್ಲಿದ್ದ ಪ್ರಾಚೀನ ಕೋಟೆಯ ಕುರುಹುಗಳನ್ನು ಇಂದಿಗೂ ನೋಡಬಹುದಾಗಿದೆ. ಇಲ್ಲಿಯ ವರದರಾಜ ದೇವಾಲಯವು ಹೊಯ್ಸಳ ಕಾಲಕ್ಕೆ ಸೇರಿರುವ ಸಾಧ್ಯತೆಗಳಿದ್ದು ತೃಣೇಶ್ವರ ದೇವಾಲಯವು ಮೈಸೂರು ಅರಸರ ಕಾಲದ ರಚನೆಯಾಗಿದೆ. ಜಗದೇಶ್ವರ ಗುಡಿ ಕಂಬದ ಮೇಲಿರುವ ಸುಮಾರು ೧೫ನೇ ಶತಮಾನದ ಶಾಸನ. ತ್ರಿಯಂಬಕ ಕಾಲವಿಮಟದ ಚಿಕ್ಕವೀರಣ್ಣೊಡೆಯರ ಶಿಷ್ಯರಾದ ಪರ್ವತದೇವರು ತ್ರಿಯಂಬಕಯ್ಯವೊಡೆಯರಿಗೆ 'ಹುರ'ದಲ್ಲಿ ಕೊಟ್ಟ ೧೫ ಕೊಳಗ ಭೂದಾನವನ್ನು ತಿಳಿಸುತ್ತಿದ್ದು, ಇದರಿಂದ ಇಲ್ಲೊಂದು ಮಠವಿದ್ದ ಅಂಶ ವೇದ್ಯವಾಗುತ್ತದೆ.

**ದೇಬೂರು (೩,೨೧೪) :** ನಂಜನಗೂಡಿನಿಂದ ನಾಲ್ಕು ಕಿ.ಮಿ. ಪಶ್ಚಿಮಕ್ಕೆ ಕಪಿಲಾ ತಟದಲ್ಲಿರುವ ಇಲ್ಲಿಂದ ಈವರೆಗೆ ಆರು ಶಾಸನಗಳು ವರದಿಯಾಗಿವೆ. ಅವುಗಳಲ್ಲೆರಡು ಗಂಗ ಶಿವಮಾರ ಹಾಗೂ ರಾಜಮಲ್ಲರ ಕಾಲಕ್ಕೆ ಸೇರಿದ್ದು, ಪುನ್ನಾಡು–೬೦೦೦ಕ್ಕೆ ಇದು ಒಳಪಟ್ಟಿದ್ದು, ದತ್ತಿ ಬಿಟ್ಟ ಅಂಶವನ್ನು ಇವು ದಾಖಲಿಸುತ್ತವೆ. ಒಂದನೆಯ ಕುಲೋತ್ತುಂಗನ ೧೧೦೧ರ ತಮಿಳು ಶಾಸನ ತ್ರುಟಿತಗೊಂಡಿದ್ದರೆ, ೧೨ನೆಯ ಶತಮಾನದ ಇನ್ನೊಂದು ಶಾಸನ ತಿರುವಿರಾಮೇಶ್ವರ ದೇವಾಲಯದ ನಂದಾದೀಪಕ್ಕೆಂದು ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ. ಉಳಿದೆರಡು ಶಾಸನಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಸೇರಿದ್ದು (೧೮೧೮) ಭಕ್ಷಿ ಭೀಮರಾಯರು ನೀಡಿದ ಇನಾಮನ್ನು ದಾಖಲಿಸಿವೆ. ಇಲ್ಲಿರುವ ರಾಮೇಶ್ವರ ದೇವಾಲಯವೇ ಚೋಳಶಾಸನದಲ್ಲಿ ಉಕ್ತವಾಗಿರುವ ತಿರುರಾಮೇಶ್ವರವಾಗಿದ್ದು, ಚೋಳರ ಕಾಲದಲ್ಲೂ ಅದಕ್ಕೆ ದತ್ತಿ ನೀಡಲಾಗಿದೆ.

ಈ ಊರಿನ ರಾಮೇಶ್ವರ ಮತ್ತು ಲಕ್ಷ್ಮಿಕಾಂತ ದೇವಾಲಯಗಳು ಉಲ್ಲೇಖಾರ್ಹವಾದವು. ರಾಮೇಶ್ವರ ದೇಗುಲದ ಮುಂದಿರುವ ಗಂಗದೊರೆ ಶಿವಮಾರನ

ಕಾಲದ ಶಾಸನವು ಈ ಊರಿನ ಇತಿಹಾಸಕ್ಕೆ ಬೆಳಕು ಚೆಲ್ಲುತ್ತದೆ. ಬಹುಶ: ಇದೇ ಅವಧಿಯಲ್ಲಿ ನಿರ್ಮಿತವಾಗಿರಬಹುದಾದ ರಾಮೇಶ್ವರ ದೇವಾಲಯವು ಗರ್ಭಗೃಹ ಮತ್ತು ನವರಂಗಗಳನ್ನು ಹೊಂದಿದೆ. ನವರಂಗವು ಹೊಯ್ಸಳರ ಕಾಲದಲ್ಲಿ ವಿಸ್ತಾರಗೊಂಡಿರಬಹುದು. ಸೂರ್ಯ, ಗಣಪತಿ, ದುರ್ಗಾ ಮುಂತಾದ ವಿಗ್ರಹಗಳು ನವರಂಗದಲ್ಲಿವೆ. ಇಲ್ಲಿಯೇ ಅಷ್ಟತೀರ್ಥಗಳಲ್ಲಿ ಒಂದಾದ ರುದ್ರಪುಷ್ಕರಣಿ ಉದ್ಭವ ತೀರ್ಥವೆಂದು ಜನರ ನಂಬಿಕೆ. ಸಮೀಪವಿರುವ ಹೊಲವೊಂದರಲ್ಲಿ ವಿಭೂತಿಯ ಮೇರ್ತಿಕೆಯು ಹೊಮ್ಮುತ್ತದೆಂದು ಜನ ನಂಬಿದ್ದಾರೆ. ಲಕ್ಷ್ಮೀಕಾಂತ ದೇವಾಲಯವು ಊರಿನ ಮಧ್ಯದಲ್ಲಿ ನಿರ್ಮಿತವಾಗಿದೆ. ಎತ್ತರದ ಜಗಲಿಯ ಮೇಲೆ ಗರ್ಭಗೃಹ, ನವರಂಗಗಳನ್ನು ಹೊಂದಿರುವ ಹೊಯ್ಸಳ ಶೈಲಿಯ ಈ ದೇವಾಲಯದಲ್ಲಿರುವ ನಾರಾಯಣ ವಿಗ್ರಹಕ್ಕೆ ಆಕರ್ಷಕ ಪ್ರಭಾವಳಿಯಿದೆ.

**ದೇವನೂರು (೩,೪೯೯) :** ನಂಜನಗೂಡಿನಿಂದ ೧೫ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ೮೦೮ರ ದೇವನೂರು ತಾಮ್ರ ಶಾಸನದಿಂದ, ರಾಷ್ಟ್ರಕೂಟ ಧಾರಾವರ್ಷನ ಮಗನಾದ ಕಂಬಯ್ಯನ್ನು ಎಡೆನಾಡು ಪುನ್ನಾಡುಗಳನ್ನು ತಳವನ(ತಲಕಾಡು)ನಗರದಿಂದ ಆಳುತ್ತಿದ್ದಾಗ, ವದನಗುಪ್ಪೆ ಗ್ರಾಮವನ್ನು ವರ್ಧಮಾನಗುರುಗಳಿಗೆ ಉಂಬಳಿ ನೀಡಿದ್ದನ್ನು ದಾಖಲಿಸುತ್ತಾ, ಶಂಕರಗೌಡನ ಕೋರಿಕೆಯಂತೆ ತಾನೇ ತಲಕಾಡಿನಲ್ಲಿ ನಿರ್ಮಿಸಿದ ಶ್ರೀವಿಜಯವಸತಿಗೂ ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ದೇವನೂರು ಮಠದ ಮುಂದಿರುವ ಸುಮಾರು ೧೦ನೇ ಶತಮಾನದ ನಿಷಿದಿ ಶಾಸನ, ಕನಕಸೇನ ಭಟಾರರ ಶಿಷ್ಯ ಉತ್ತವಯ್ಯನು ಸನ್ಯಾಸನ ಮರಣ ಹೊಂದಿದ ಅಂಶವನ್ನು ತಿಳಿಸುತ್ತದೆ. ಪುರದಯ್ಯನ ಗುಡಿ ಮುಂದಿರುವ ೧೫೧೭ರ ಶಾಸನ ಸುತ್ತೂರ ಮಠಕ್ಕೆ ಬಸವಲಿಂಗರಾಜರು ತಾಯೂರು ಸ್ಥಳದ ಗ್ರಾಮವನ್ನು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಇಲ್ಲಿಯ ವೀರಶೈವಮಠ ಗ್ರಾಮದ ಪ್ರಮುಖ ಆಕರ್ಷಣೆಯಾಗಿದ್ದು, ವರ್ಷಂಪ್ರತಿ ಜೂನ್ ತಿಂಗಳಲ್ಲಿ ನಡೆಯುವ ಗುರುಮಲ್ಲೇಶ್ವರ ಜಾತ್ರೆ ಉಲ್ಲೇಖಾರ್ಹವಾಗಿದೆ.

**ನಗರ್ಲೆ (೩,೫೧೦) :** ನಂಜನಗೂಡಿನಿಂದ ೧೫ ಕಿ.ಮೀ.ಪೂರ್ವದಲ್ಲಿರುವ ಇದು, ಗಂಗರ ಕಾಲದಿಂದಲೂ ಪ್ರಸಿದ್ಧಿ ಪಡೆದಿದೆ. ಈವರೆಗೆ ವರದಿಯಾಗಿರುವ ನಾಲ್ಕು ಶಾಸನಗಳಲ್ಲಿ ಮೂರು ಗಂಗರದಾದರೆ ಉಳಿದೊಂದು ಚೋಳ ಶಾಸನವಾಗಿದೆ. ನಾರಾಯಣಸ್ವಾಮಿ ಗುಡಿ ಮುಂದಿರುವ ೯೭೧ರ ಶಾಸನ, ಪೆರ್ಮಾನಡಿಯ ಮನೆವಗತಿ (ಮನೆಮಗಳು) ನೀಲಬ್ಬೆಯ ಮಗ ರಾಚಮ್ಮನು ಈ ಕಂಬವನ್ನು ನಿಲ್ಲಿಸಿ ಅದಕ್ಕೆ 'ಅಯ್ಯಯ' ಎಂದು ಹೆಸರಿಟ್ಟಿದ್ದನ್ನು ದಾಖಲಿಸಿದರೆ, ಸೋಮೇಶ್ವರ ಗುಡಿ ಹಾಗೂ ದುರ್ಗಾಪರಮೇಶ್ವರಿ ಗುಡಿಗಳ ಮುಂದಿರುವ ಸುಮಾರು ೧೦ನೇ ಶತಮಾನಕ್ಕೆ ಸೇರಿದ ಶಾಸನಗಳಿಂದ ಸತ್ಯವಾಕ್ಯ ಕೊಂಗುಣಿ ವರ್ಮನ ಆಳ್ವಿಕೆಯಲ್ಲಿ ವಿದ್ಯಾಧರನು ಅರಸನಿಗೆ ಕೋರಿಕೆ ಸಲ್ಲಿಸಿ, ನಗರಲ (ನಗರ್ಲೆ)ದ ನನ್ನಯ್ಯನ ದೇಗುಲದಲ್ಲಿ ಓದುವ ವಟು ಹಾಗೂ ಸನ್ಯಾಸಿಗಳಿಗೆಂದು ಭೂದಾನ ಕೊಡಿಸಿದನೆಂದು ತಿಳಿಸುತ್ತಿದ್ದು, ಶಾಸನದಲ್ಲಿ

ಬೆಳ್ಗುನ್ದೂರು, ಕಿರುವೆಳ್ಗುನ್ದೂರು, ಸತ್ತಿಯೂರು (ಸುತ್ತೂರು), ಸಿಂಗೂರು, ನಗರಲಗಳ ಮಹಾಪರಿಷೆ ಹಾಗೂ ಎಡೆನಾಡ ಮೂರು ನಾಡಗೌಂಡರು ಈ ದಾನಕ್ಕೆ ಸಾಕ್ಷಿಯಾಗಿದ್ದ ಅಂಶ ದಾಖಲಾಗಿದೆ. ಊರ ಮಾರಿಗುಡಿ ಮುಂದಿರುವ ೧೦೨೮ರ ಇನ್ನೊಂದು ಶಾಸನ ದೇವಪೂಜೆ ಮಾಡುವ ಭಟಾರರಿಗೆ ೧೦ ಕೊಳಗ ಭತ್ತವನ್ನು ದತ್ತಿ ಬಿಟ್ಟಿದ್ದನ್ನು ತಿಳಿಸುತ್ತಾ, ಸಾಂದರ್ಭಿಕವಾಗಿ ಸಿಂಗಪರಿಷೆ ಮಠವನ್ನು ಉಲ್ಲೇಖಿಸುತ್ತದೆ. ಇಲ್ಲಿಯ ಸೋಮೇಶ್ವರ, ನಾರಾಯಣ ಹಾಗೂ ದುರ್ಗಾಪರಮೇಶ್ವರಿ ದೇವಾಲಯಗಳು ಪ್ರಾಚೀನದ್ದಾಗಿದ್ದು ಚಾರಿತ್ರಿಕ ಮಹತ್ವ ಪಡೆದಿದೆ. ಇಲ್ಲಿನ ವಿಗ್ರಹರಹಿತ ದೇವಾಲಯವೊಂದು ಪುರಾತನ ಕಥೆ, ನಂಬಿಕೆ, ಕಿತ್ತಾಟಗಳಿಗೆ ಸಾಕ್ಷಿಯಾಗಿ ನಿಂತಿದೆ. ಬೇರೆಡೆಯಿದ್ದು ಶಿಥಿಲವಾಗಿದ್ದ ಆಲಯವನ್ನು ಇಲ್ಲಿ ಪುನರ್ ಜೋಡಿಸಲಾಗಿದೆಯೆಂದು ಊರಿನ ಜನತೆ ತಿಳಿಸಿದರೂ, ದೇಗುಲದ ಮುಂದಿರುವ ಏಕಶಿಲಾ ಸ್ತಂಭ, ಅದರಲ್ಲಿನ ಶಾಸನಾಧಾರ, ಈ ಅಭಿಪ್ರಾಯವನ್ನು ಸುಳ್ಳಾಗಿಸುತ್ತದೆ. ಈ ಪುರಾತನ ದೇಗುಲಕ್ಕೆ ಕಾಯಕಲ್ಪ ನೀಡುವ ಅಗತ್ಯವಿದೆ. ಗಂಗರ ಕಾಲದಲ್ಲಿ ನಿರ್ಮಿತವಾದ ಮತ್ತೊಂದು ಗುಡಿ ಇಲ್ಲಿದ್ದಿರಬಹುದು. ಇಲ್ಲಿನ ೯೭೦–೭೧ನೇ ಅವಧಿಯ ಶಾಸನವು ವಿದ್ಯಾಧರಯ್ಯ ಎಂಬ ಅಧಿಕಾರಿ 'ನನ್ನಯ್ಯ'(ನಾರಾಯಣ)ಗುಡಿಗೆ ಪೆರ್ಮನಾಡಿಯ ಒಪ್ಪಿಗೆಯಿಂದ ದತ್ತಿ ನೀಡಿರುವುದನ್ನು ತಿಳಿಸುತ್ತದೆ. ದುರ್ಗಾಪರಮೇಶ್ವರಿ ದೇವಾಲಯದಲ್ಲಿ, ಮೂರು ಅಡಿ ಎತ್ತರದ, ಮಹಿಷಮರ್ದಿನಿಯ ಆಕರ್ಷಕ ವಿಗ್ರಹವಿದೆ. ಗ್ರಾಮದೇವತೆ ಭ್ರಮರಾಂಬ ಅಥವಾ ಮಾಳಗರಸಮ್ಮ ಗಂಗ ಕಾಲದ ವಿಗ್ರಹವಾಗಿದೆ. ಅಲ್ಲದೆ ಐದು ಅಡಿ ಎತ್ತರದ ಪಾರ್ಶ್ವನಾಥನ ಶಿಲ್ಪವಿರುವ ಹೊಯ್ಸಳ ಶೈಲಿಯ ಬಸದಿಯೊಂದು ತೀರಾ ಹೀನಾಯ ಸ್ಥಿತಿಯಲ್ಲಿದೆ.

**ನಂಜನಗೂಡು (೪೮,೨೩೨) :** ದಕ್ಷಿಣಕಾಶಿ, ಪರಶುರಾಮಕ್ಷೇತ್ರ, ಕಪಿಲಾ–ಕೌಂಡಿನ್ಯ ಸಂಗಮ ಸ್ಥಳ ಎಂದೆಲ್ಲಾ ಉಲ್ಲೇಖಿತಗೊಂಡಿರುವ ಇದು, ಇಂದು ಕೈಗಾರಿಕಾ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯನ್ನು ತೋರುತ್ತಿವೆ. ತಾಲೂಕಿನ ಏಕೈಕ ಪಟ್ಟಣವಾದ ನಂಜನಗೂಡಿನ ಸರ್ವಾಂಗೀಣ ಅಭಿವೃದ್ಧಿಗೆ ಮುಖ್ಯ ಕಾರಣ, ಇಲ್ಲಿನ ನಂಜುಂಡೇಶ್ವರ ಆಲಯ. ಸುಮಾರು ೫೨೦೦೦ ಚದುರ ಅಡಿ ವಿಸ್ತೀರ್ಣದ, ಆಚ್ಛಾದಿತ ಪ್ರದೇಶದ ದೃಷ್ಟಿಯಿಂದ ರಾಜ್ಯದಲ್ಲೇ ಪ್ರಥಮ ಸ್ಥಾನಪಡೆದಿರುವ ಈ ಆಲಯದ ಉದ್ದ ೩೮೦ ಅಡಿ ಮತ್ತು ಅಗಲ ೧೬೮ ಅಡಿ. ೧೪೬ಕ್ಕೂ ಹೆಚ್ಚು ಕಂಬಗಳು ಈ ಆಲಯಕ್ಕೆ ಆಸರೆಯಾಗಿವೆ. ಹೀಗೆ ಬೃಹತ್ತು–ಮಹತ್ತು ಎರಡೂ ದೃಷ್ಟಿಯಿಂದಲೂ ವಿಶಿಷ್ಟವಾಗಿರುವ ಆ ಆಲಯ 'ನಂಜನಗೂಡಿನ ಜೀವನಾಡಿ'ಯಾಗಿದೆ. ಶ್ರೀ ಮನ್ಮಹಾದೇವ ದೇವೋತ್ತಮ, ಪಾರ್ವತೀ ಪ್ರಾಣನಾಥ, ಭಕ್ತಜನವತ್ಸಲ, ಶರಣುವಂದರ ಕಾವ, ಭವರೋಗ ವೈದ್ಯ, ಕರ್ಮಾರಣ್ಯ ದಹನ ದಾವಾನಲ, ತಿಮಿರ ದಿವಾಕರ, ಯುಕ್ತಿ ಭುಕ್ತಿ ಮುಕ್ತಿ ಫಲದಾಯಕ, ಶಮೆಶಾಂತಿ ಮೌನ, ಪರಶುರಾಮ ಪಾಪಕ್ಷಯ, ಕೃತಯುಗ ರಾಮನಾಥ, ತ್ರೇತಾಯುಗ ಭೋಗನಾಥ, ದ್ವಾಪರಯುಗ ಸಂಗಮೇಶ್ವರ, ಕಲಿಯುಗ ಚಿಂತಾರತ್ನವಾಗಿ ಕಪಿಲಾ–ಕೌಂಡಿನ್ಯ ಸಂಗಮಕ್ಷೇತ್ರದಲ್ಲಿ ಪ್ರಸನ್ನ ಮೂರ್ತಿಯಾದ ಅಘಾಪಹಾರಿ ಶ್ರೀ ನಂಜುಂಡೇಶ್ವರ ದೇವರು.....' ಎಂದೆಲ್ಲಾ ಸುಮಾರು ೧೪–೧೫ನೆಯ ಶತಮಾನದ ಶಾಸನಗಳಲ್ಲಿ

ವರ್ಣಿತವಾಗಿರುವ ನಂಜುಂಡೇಶ್ವರನನ್ನು ನಂಜನಗೂಡಿನ ಸ್ಥಳಪುರಾಣವು 'ಸ್ವಯಮುದ್ಭವವಾದ ಚತುರ್ಯುಗದ ಮೂರ್ತಿ' ಎನ್ನುತ್ತದೆ. ಕೈಲಾಸದ ಶಿಖರಭಾಗ ಇಲ್ಲಿ ಬಿದ್ದು ಲಿಂಗರೂಪವಾಯಿತೆನ್ನುತ್ತದೆ. ವಿಷಂಪ್ರಾಜಿ ಸೊಪ್ಪಿನ ಮೆಳೆಯ ನಡುವೆ ಹುದುಗಿ ಹೋಗಿದ್ದ ಲಿಂಗವನ್ನು ಪತ್ತೆಹಚ್ಚಿದ ಪರಶುರಾಮ ಇಲ್ಲಿ ತಪಸ್ಸನ್ನಾಚರಿಸುವುದರ ಮೂಲಕ ತನ್ನ ಪಾಪ ಕಳೆದುಕೊಂಡರೆ, ಸತಿಯನ್ನು ಶಪಿಸಿ ಇಲ್ಲಿಗೆ ಬಂದ ಗೌತಮ ಈ ಲಿಂಗದ ಆರಾಧನೆಯಿಂದ ಮನಸ್ಸಮಾಧಾನ ಹೊಂದಿ ಲಿಂಗಕ್ಕೆ ಆಲಯ ಕಟ್ಟಿಸಿ ರಥೋತ್ಸವ ಏರ್ಪಡಿಸಿದನಂತೆ. ಕಪಿಲಾ ನದಿಯಲ್ಲಿ ಈಶ್ವರ ಪಾರ್ವತಿಯರು ಜಲಕ್ರೀಡೆಯಾಡುವಾಗ ಈಶ್ವರನ ಮಕುಟದಿಂದ ರತ್ನಮಣಿ ಬಿದ್ದ ಸ್ಥಳ 'ಮಣಿ ಕರ್ಣಿಕಾ ತೀರ್ಥ'ವಾಯಿತು. ವೃಶ್ಚಿಕ ಮಾಸದಲ್ಲಿ ಎಲ್ಲಾ ಪುಣ್ಯತೀರ್ಥಗಳೂ ಕಪಿಲೆಯಲ್ಲಿ ತಮ್ಮ ಪಾಪಗಳನ್ನು ಕಳೆದುಕೊಳ್ಳುವುದಕ್ಕೆ ಸೇರುವುದರಿಂದ ಆ ಸಮಯದಲ್ಲಿ ಇಲ್ಲಿ ಸ್ನಾನ ಮಾಡುವುದರಿಂದ ಸಕಲ ತೀಥಗಳಲ್ಲೂ ಮಿಂದ ಪುಣ್ಯ ಬರುತ್ತದೆ – ಎಂಬಿವೇ ಹೇಳಿಕೆಗಳು ಸಂಸ್ಕೃತ ಪುರಾಣ ಭಾಗದಲ್ಲಿದೆ. ಇಲ್ಲಿಂದ ಈವರೆಗೆ ೧೩೦ಕ್ಕೂ ಹೆಚ್ಚು ಶಾಸನಗಳು ವರದಿಯಾಗಿದ್ದು ಅವುಗಳ ನೆರವಿನಿಂದ ನಂಜನಗೂಡಿನ ಸಾಂಸ್ಕೃತಿಕ ಬೆಳವಣಿಗೆಯನ್ನು ಮನಗಾಣಬಹುದಾಗಿದೆ.

ಆಲಯವು ಮೇಲ್ನೋಟಕ್ಕೆ ದಾಕ್ಷಿಣಾತ್ಯ ಶೈಲಿಯ, ಮೈಸೂರು ಒಡೆಯರ ಕಾಲದ ವಾಸ್ತು ಎಂಬುದು ಸ್ಪಷ್ಟವಾದರೂ ಸೂಕ್ಷ್ಮ ಅವಲೋಕನ ಇಡೀ ಕಟ್ಟಡ ಒಂದೇ ಕಾಲದ ರಚನೆಯಲ್ಲ ಎಂಬುದನ್ನು ಸ್ಫುಟಪಡಿಸುತ್ತದೆ. ಒಂಬತ್ತು–ಹತ್ತನೇ ಶತಮಾನದಿಂದ ಇಪ್ಪತ್ತನೇ ಶತಮಾನದವರೆಗೂ ಈ ಆಲಯವು ರಚನೆ, ಪುನರ್ರಚನೆ, ಸೇರ್ಪಡೆಗಳ ಮೂಲಕ ವಿಸ್ತಾರವಾಗುತ್ತ ಬಂದುದನ್ನು ಇಲ್ಲಿಯ ಶಾಸನ ಮತ್ತಿತರ ಆಧಾರಗಳಿಂದ ಮನಗಾಣಬಹುದು.

ನಂಜುಂಡೇಶ್ವರನ ಮೂಲಗರ್ಭಗುಡಿ ಮತ್ತು ಸುಕನಾಸಿಗಳನ್ನು ಗಂಗರ ಕಾಲದ ರಚನೆ ಎಂದು ಹೇಳಲಾಗಿದ್ದು. ಈ ಅವಧಿಯಲ್ಲಿಯೇ ಗರ್ಭಗುಡಿ–ಸುಕನಾಸಿ ಮತ್ತು ಮಹಿಷಮರ್ಧಿನಿ ವಿಗ್ರಹ ನಿರ್ಮಾಣವಾಗಿವೆ. ನಂತರ ಹೊಯ್ಸಳರ ಕಾಲದಲ್ಲಿ ನವರಂಗ ರೂಪುಗೊಂಡಿದ್ದು, ಪುನರ್‌ನಿರ್ಮಾಣ ಮಾಡಿರಬಹುದೆಂದೂ ಊಹಿಸಬಹುದಾಗಿದೆ. ಮೂಲತಃ ಹದಿನಾರು ಕಂಬಗಳಿಂದ ಕೂಡಿದ್ದು, ಅತಿ ವಿಶಾಲವಾಗಿದ್ದ ಈ ನವರಂಗದ ಒಳಗೇ, ನಂತರದಲ್ಲಿ ನಿರ್ಮಾಣವಾಗಿರುವ ಏಳು ಚಿಕ್ಕ ಗುಡಿಗಳಿಂದಾಗಿ ಈಗ ಇದು ಒಂಬತ್ತು ಕಂಬಗಳಿಗೆ ಸಂಕುಚಿತಗೊಂಡಿದೆ. ಒಳಮಹಾದ್ವಾರದ ಮುಂದಿರುವ ನಾಟ್ಯ ಗಣಪತಿ ವಿಗ್ರಹದಲ್ಲೂ ಹೊಯ್ಸಳ ಶೈಲಿ ಕಂಡುಬರುತ್ತದೆ.

ಒಳಗಿನ ಮಹಾದ್ವಾರ, ರಾಜಗೋಪುರ, ಬಲಿಪೀಠ, ಧ್ವಜಸ್ತಂಭ, ಸ್ನಪನ ಗಣಪತಿ, ದಕ್ಷಿಣಾಮೂರ್ತಿ, ಸೂರ್ಯನಾರಾಯಣ, ಪಾರ್ವತಿ ವಿಗ್ರಹ ಮತ್ತು ಗುಡಿ, ನಾರಾಯಣಸ್ವಾಮಿ ಗುಡಿಯ ಶ್ರೀದೇವಿ–ಭೂದೇವಿ ವಿಗ್ರಹ, ದೀಪಸ್ತಂಭ ಮತ್ತು ಆಲಯದ ಮುಂದಿರುವ ಕಲ್ಯಾಣಿ ವಿಜಯನಗರ ಆರಂಭ ಕಾಲದ ರಚನೆಗಳಾಗಿವೆ. ಬಲಿಪೀಠದ

ಮೇಲೆ ೧೪೩೨ರ ಶಾಸನವೊಂದು ದಾಖಲಾಗಿರುವುದರಿಂದ ಮೊದಲೇ ಈ ಆಲಯವು ವಿಜಯನಗರದ ಅರಸರಿಂದ ಜೀರ್ಣೋದ್ಧಾರವಾಗಿರಬಹುದು.

ನಂತರದ ಹಂತದಲ್ಲಿ ಮೈಸೂರು ಒಡೆಯರಿಂದ ಆದ ಅಭಿವೃದ್ಧಿ ಕಾರ್ಯಗಳು ಗಮನ ಸೆಳೆಯುತ್ತವೆ. ಮೈಸೂರು ಒಡೆಯರು ಆರಂಭದಿಂದಲೂ ನಂಜುಂಡೇಶ್ವರನ ಆರಾಧಕರಾಗಿದ್ದರೂ ಆಲಯಕ್ಕೆ ಇವರ ಕೊಡುಗೆಯ ಮೊದಲ ದಾಖಲೆ ದೊರೆಯುವುದು ೧೬೪೪ರಲ್ಲಿ. ಅದೂ ಚಾಮರಾಜ ಒಡೆಯರ ಪುತ್ರ, ರಾಜ ಒಡೆಯರ ದಾಯಾದಿ ದಳವಾಯಿ ವಿಕ್ರಮರಾಯ ನಿರ್ಮಿಸಿದ ದೊಡ್ಡ ಬಸವನ ವಿಗ್ರಹದೊಂದಿಗೆ ಮುಂದೆ ಹೊರಪ್ರಾಕಾರ ಹಾಗೂ ಬಸವನಕಟ್ಟೆಯನ್ನೂ ನಿರ್ಮಿಸಿ ಆಲಯವನ್ನು ವಿಶಾಲಗೊಳಿಸಿದವನು ಕಳಲೆ ನಂಜರಾಜ.

ಇವನು ನಂಜನಗೂಡಿನಲ್ಲಿ ದೇವಸ್ಥಾನದ ಕೈಸಾಲೆಮಂಟಪ, ಗೋಪುರ ಹಾಗೂ ಊರ ಸುತ್ತಾ ಕೋಟೆಯನ್ನು ನಿರ್ಮಿಸಿದನೆಂದು ದೇವಚಂದ್ರ ಹೇಳಿದರೆ, ಫ್ರಾನ್ಸಿಸ್ ಬುಕಾನನ್ ತನ್ನ ದಿನಚರಿಯಲ್ಲಿ ನಂಜರಾಜಯ್ಯನು ಎರಡುನೂರು ಕ್ಯೂಬಿಟ್ ಸ್ಕ್ವೇರ್‌ನಷ್ಟಿದ್ದ ದೇಗುಲವನ್ನು ನಾಲ್ಕುನೂರು ಕ್ಯೂಬಿಟ್ ಸ್ಕ್ವೇರ್‌ಗೆ ವಿಸ್ತರಿಸಿದನೆಂದು ಹೇಳುತ್ತಾನೆ. ಆಲಯದ ದಕ್ಷಿಣ ಪ್ರಾಕಾರದಲ್ಲಿರುವ ಅರವತ್ತಾರು ಪುರಾತನರ ವಿಗ್ರಹಗಳನ್ನು ನಂಜರಾಜಯ್ಯನೇ ನಿರ್ಮಿಸಿರಬಹುದು. ಕೆಲವು ಕಂಬಗಳಲ್ಲಿ ಕಾಣುವ ಕೈಮುಗಿದ ಭಕ್ತವಿಗ್ರಹಗಳನ್ನು ಇವನದೆಂದು ಗುರುತಿಸಲಾಗುತ್ತದೆ.

ಟಿಪ್ಪು ಸುಲ್ತಾನನು ಮೈಸೂರು ಸಂಸ್ಥಾನದ ಮೇಲೆ ಅಧಿಪತ್ಯ ಸ್ಥಾಪಿಸಿ, ಆಡಳಿತ ಸೂತ್ರ ಕೈಗೆತ್ತಿಕೊಂಡ ಸಂದರ್ಭದಲ್ಲಿ ಈ ಆಲಯವು ಹಾನಿಗೊಳಗಾಗಿತ್ತೆಂದು ಬುಕಾನನ್ ಹೇಳುತ್ತಾನೆ. ದೇವಚಂದ್ರ ಕೂಡ, ಸರ್ವೇಜನರು ಕೇಳಿಕೊಂಡದ್ದರಿಂದ ಟಿಪ್ಪು ಸುಲ್ತಾನನಿಂದಾದ ಹಾನಿಗಳನ್ನು ವರ್ಣಿಸುತ್ತಾ'.... ನಂಜನಗೂಡಿಗೆ ಇಲಾಬಾದ್ ಎಂದು ಕರೆದು ನಂಜುಂಡ ಲಿಂಗಮಂ ನಿರಂಜನಮೆಂದುಳಿಸಿದನೆಂದು ಹೇಳಿದ್ದಾನೆ. ಬಹುಶಃ ಟಿಪ್ಪು ಮೊದಲು ಆಲಯಕ್ಕೆ ಹಾನಿ ಮಾಡಲು ಯತ್ನಿಸಿದರೂ ನಂತರ ಅಮೂಲ್ಯವಾದ ಪಚ್ಚೆಲಿಂಗವನ್ನೂ, ಪಚ್ಚೆಹಾರವನ್ನೂ ಕಾಣಿಕೆಯಾಗಿ ನೀಡಿರುವ ಸಾಧ್ಯತೆ ಇದೆ.

ನಂಜುಂಡೇಶ್ವರ ದೇವಾಲಯದ ಇಂದಿನ ಭವ್ಯತೆಗೆ, ಭದ್ರತೆಗೆ ಮುಖ್ಯ ಕಾರಣ ಮುಮ್ಮಡಿ ಕೃಷ್ಣರಾಜ ಒಡೆಯರು. ಇವರು ನಂಜುಂಡೇಶ್ವರನ ಗುಡಿಗೆ ವಿವಿಧ ರೀತಿಯ ಆಭರಣಗಳನ್ನು, ಲೋಹ ವಿಗ್ರಹಗಳನ್ನು ನೀಡಿದ್ದಾರೆ. ರಥ, ವಾಹನಗಳನ್ನು ನಿರ್ಮಿಸಿ ಕೊಟ್ಟಿದ್ದಾರೆ. ಆಲಯವನ್ನು ವಿಸ್ತಾರಗೊಳಿಸಿ ಅದಕ್ಕೆ ಭವ್ಯವಾದ ಹೊರಚೌಕಟ್ಟನ್ನು ನೀಡಿದ್ದಾರೆ.

ನೀಲಗಿರಿ ಮುದ್ದಣ್ಣನು ಮಹಾದ್ವಾರದ ಮುಂದೆ ದ್ವಾರಮಂಟಪವನ್ನು ೧೯೦೦ರಲ್ಲಿ ನಿರ್ಮಿಸಿ, ಆಲಯದ ಸೌಂದರ್ಯಕ್ಕೆ ಮೆರುಗು ನೀಡಿದ್ದಾನೆ. ಈ ಆಲಯದ ಬೆಳವಣಿಗೆಯನ್ನು ಆಧಾರಸಹಿತವಾಗಿ ಗುರುತಿಸಬಹುದಾಗಿದೆ. ಜೊತೆಗೆ ಇದಕ್ಕೆ ಅಪಾರ

ಶ್ರಮ, ಕೌಶಲ್ಯಗಳು ವ್ಯಯವಾಗಿರುವುದನ್ನೂ ಕೂಡುಕಂಭ, ಮೇಲ್ಛಾವಣಿಯ ಜೋಡಣೆಗಳ ಅವಲೋಕನದಿಂದ ಅರಿಯಬಹುದಾಗಿದೆ.

**ಆಲಯದ ಮುಖ್ಯ ಮೂರ್ತಿಗಳು**

**ನಂಜುಂಡೇಶ್ವರ ಲಿಂಗ :** ಈ ಶಿವಲಿಂಗವು ಸುಮಾರು ಮೂರು ಅಡಿ ಎತ್ತರದ ನಯವಾದ ಕೃಷ್ಣಶಿಲೆಯಿಂದ ರೂಪುಗೊಂಡಿದೆ. ಇದರ ಮೇಲಿರುವ ಬ್ರಹ್ಮಸೂತ್ರದ ಲಕ್ಷಣಗಳಿಂದ ಇದನ್ನು ವಿಜಯನಗರ ಆರಂಭಕಾಲದ್ದೆಂದು ಗುರುತಿಸಬಹುದು. ಈ ಲಿಂಗದ ವಾಯವ್ಯ ಭಾಗದಲ್ಲಿರುವ ಅರ್ಧಚಂದ್ರಾಕೃತಿಯ ಗುರುತು, ಪರಶುರಾಮನ ಕೊಡಲಿಯೇಟಿನಿಂದ ಆದದ್ದು ಎಂಬ ಪ್ರತೀತಿ ಇದೆ.

**ಆದಿಕೇಶವ :** ಎರಡೂವರೆ ಅಡಿ ಎತ್ತರದ ಜನಾರ್ದನ ವಿಗ್ರಹ ಮತ್ತು ಅದರ ಗರ್ಭಗುಡಿಗಳು ನಂಜುಂಡೇಶ್ವರನ ಗರ್ಭಗುಡಿಗಿಂತಲೂ ಪುರಾತನದ್ದಾಗಿದ್ದು, ನಂಜುಂಡೇಶ್ವರನ ಆಲಯಕ್ಕಿಂತ ಮೊದಲೇ ಇಲ್ಲಿ ನಾರಾಯಣನ ಗುಡಿ ಇದ್ದು, ನಂತರ ನಂಜುಂಡೇಶ್ವರನ ಗುಡಿ ನಿರ್ಮಾಣವಾಗಿ, ಕ್ರಮೇಣ ನಂಜುಂಡೇಶ್ವರನ ಪ್ರಭಾವ ಹೆಚ್ಚಿ ಆಲಯ ವಿಸ್ತಾರವಾದಾಗ ಎರಡೂ ಗುಡಿಗಳೂ ಒಂದೇ ಆವರಣಕ್ಕೆ ಸೇರಿ ಹೋದಂತೆ ತೋರುತ್ತದೆ. ಆದಿಕೇಶವನಿಗೆ ಗೋಕುಲಾಷ್ಟಮಿ, ಲಕ್ಷ್ಮೀ ಕಲ್ಯಾಣ, ಬೃಂದಾವನೋತ್ಸವ ಮುಂತಾದ ದಿನಗಳಲ್ಲಿ ವಿಶೇಷ ಪೂಜೆ, ಉತ್ಸವ ನಡೆಯುತ್ತಿದ್ದು, ಸತ್ತವರಿಗೆ 'ವೈಕುಂಠದ ಬಾಗಿಲು' ತೆರೆಸುವ ಆಚರಣೆ ಇನ್ನೂ ಇಲ್ಲಿ ರೂಢಿಯಲ್ಲಿದೆ.

**ಪಾರ್ವತಿ :** ವಿಜಯನಗರ ಶೈಲಿಯ ನಾಲ್ಕೂವರೆ ಅಡಿ ಎತ್ತರದ ಈ ವಿಗ್ರಹಕ್ಕೆ ತಾಳಿ, ಕಂಠೀಹಾರ, ಭುಜಕೀರ್ತಿ, ಕೈಕಡಗ, ಕಾಲಂದುಗೆ ಹಾಗೂ ಕರಂಡ ಶೈಲಿಯ ಮುಕುಟಲಂಕಾರಗಳಿವೆ. 'ಶ್ರೀಚಕ್ರ'ವು ದೇವಿಯ ಮುಂದಿದೆ.

**ದೊಡ್ಡಬಸವ :** ಈಗ ಆಲಯದ ಒಳಗೆ ಸೇರಿಹೋಗಿರುವ, ಆದರೆ ನಿರ್ಮಾಣ ಕಾಲದಲ್ಲಿ ಆಲಯದ ಹೊರಭಾಗದಲ್ಲಿ ಸ್ಥಾಪಿತವಾಗಿದ್ದ ಇದು ಇಲ್ಲಿಯ ಆಲಯದ ಪ್ರಧಾನ ಆಕರ್ಷಣೆಗಳಲ್ಲಿ ಒಂದಾಗಿದೆ. ಸುಮಾರು ಎಂಟು ಅಡಿ ಎತ್ತರವಿರುವ, ನಯವಾದ ಕಪ್ಪು ಏಕಶಿಲೆಯಿಂದ ನಿರ್ಮಿತವಾಗಿರುವ ಈ ನಂದಿ ವಿಗ್ರಹವು ಗಾತ್ರದಲ್ಲಿ ಚಾಮುಂಡಿ ಬೆಟ್ಟದ ಬಸವನಿಗಿಂತ ಕಿರಿದಾಗಿದ್ದರೂ ಕಲೆಗಾರಿಕೆಯಲ್ಲಿ ಅತ್ಯುತ್ತಮವಾಗಿದೆ.

**ಶೈವಪುರಾತನರು** : ಆಲಯದ ದಕ್ಷಿಣ ಪ್ರಾಕಾರದಲ್ಲಿರುವ ಅರವತ್ತಾರು ಪುರಾತನರ ವಿಗ್ರಹಗಳು ಚೋಳ ಕಾಲದ್ದೆಂಬ ಮಾತಿದೆ. ಆದರೆ ವಿಗ್ರಹಗಳ ಶಿಲ್ಪಶೈಲಿಯು ಹದಿನೆಂಟನೇ ಶತಮಾನವನ್ನು ಪ್ರತಿನಿಧಿಸುವುದರಿಂದ ಆಲಯವನ್ನು ವಿಸ್ತಾರಗೊಳಿಸಿದ ಕಳಲೆ ನಂಜರಾಜಯ್ಯನಿಂದ ನಿರ್ಮಿತವಾಗಿರುವ ಸಾಧ್ಯತೆ ಹೆಚ್ಚಿದೆ.

**ಲೀಲಾಮೂರ್ತಿಗಳು :** ಆಲಯದ ಉತ್ತರ ಪ್ರಾಕಾರದಲ್ಲಿ ಈಶ್ವರನ ವಿವಿಧ ಲೀಲೆಗಳನ್ನು ಸಾರುವ ಇಪ್ಪತ್ತೈದು ಮೂರ್ತಿಗಳಿವೆ. ಮುಮ್ಮಡಿ ಕೃಷ್ಣರಾಜ ಒಡೆಯರಿಂದ

ನಿರ್ಮಿತವಾಗಿರುವ ಈ ಮೂರ್ತಿಗಳು ಸಹಜ ಸುಂದರ ಕೆತ್ತನೆಯಿಂದ ಕೂಡಿದ್ದು ಹತ್ತೊಂಬತ್ತನೇ ಶತಮಾನದ ಮೂರ್ತಿಶಿಲ್ಪಕ್ಕೆ ಅತ್ಯುತ್ತಮ ಮಾದರಿಯಾಗಿವೆ. ಇವುಗಳಲ್ಲಿ 'ಕಾಲಸಂಹಾರ ಮೂರ್ತಿ' ಮಾರ್ಕಂಡೇಯನನ್ನು ಯಮನಿಂದ ರಕ್ಷಿಸಲು ಮುಂದಾದ ಶಿವನ ಮೃತ್ಯುಂಜಯ ರೂಪವನ್ನು ಹೊಂದಿರುವುದರಿಂದ ವಿಶೇಷ ಮಹತ್ವ ಪಡೆದಿದೆ.

**ಮುಮ್ಮಡಿ ಕೃಷ್ಣರಾಜ ಒಡೆಯರ ಭಕ್ತ ವಿಗ್ರಹ :** ಇವರು ನಂಜುಂಡೇಶ್ವರನ ಮೇಲಿಟ್ಟಿದ್ದ ಅತೀವ ಭಕ್ತಿಯ ದ್ಯೋತಕವಾಗಿ ಕುಟುಂಬದೊಂದಿಗಿರುವ ಅವರ ಭಕ್ತ ವಿಗ್ರಹವು ಆಲಯದ ದಕ್ಷಿಣ ಪ್ರಾಕಾರದಲ್ಲಿದೆ. ಇಂಥ ವಿಗ್ರಹಗಳು ಚಾಮರಾಜನಗರ, ಮೇಲುಕೋಟೆ, ಚಾಮುಂಡಿಬೆಟ್ಟ ಮತ್ತು ಮೈಸೂರಿನ ಕೋಟೆ ಕೃಷ್ಣಸ್ವಾಮಿ ಆಲಯಗಳಲ್ಲೂ ಇವೆ.

**ಚಂಡಿಕೇಶ್ವರ :** ಆಲಯದ ಕಾವಲುಗಾರನಾದ ಇವನು, ಆಲಯಕ್ಕೆ ಬಂದು ಹೋಗುವವರ ಪುಣ್ಯದ ಲೆಕ್ಕ ಇಡುವವನು ಎಂಬ ನಂಬಿಕೆ ಇದೆ. ಹೀಗಾಗಿ ತಾವು ಬಂದಿದ್ದುದರ ಬಗ್ಗೆ ಈತನಿಗೆ ಮನವರಿಕೆ ಮಾಡಿಕೊಡಲು ಇವನ ಪುಟ್ಟ ಗುಡಿಯ ನಾಲ್ಕೂ ಕಡೆ ಗೋಡೆ ತಟ್ಟಿ, ಚಪ್ಪಾಳೆ ಹಾಕಿ, 'ಈಶ್ವರನ ದರ್ಶನ ಆಯಿತು, ಪಾರ್ವತಿ ದರ್ಶನ ಆಯಿತು, ಈಗ ನಿನ್ನ ದರ್ಶನಕ್ಕೆ ಬಂದಿದ್ದೇವೆ. ಯಮನ ಕಡೆಯವರು ಕೇಳಿದರೆ ಶಿವನ ಕಡೆಯವರು ಬಂದಿದ್ದರು ಎಂದು ಹೇಳಿಬಿಡು' ಎಂದು ವರದಿ ಒಪ್ಪಿಸುತ್ತಾರೆ. ಅಲ್ಲದೆ ಮಕ್ಕಳ ಚಂಡಿತನ ನಿವಾರಿಸುವ ಶಕ್ತಿ ಈತನಲ್ಲಿದೆ ಎಂಬ ನಂಬಿಕೆಯಿಂದಾಗಿ ಮಕ್ಕಳಿಂದ ಪೂಜೆ ಮಾಡಿಸಿ, 'ನನ್ನ ಚಂಡಿತನ ತೆಗೆದುಕೊಂಡು ಸಾಧುತನ ಕೊಡು' ಎಂದು ಹೇಳಿಸುತ್ತಾರೆ.

ಇವುಗಳಲ್ಲದೆ ಸ್ನಪನ ಗಣಪತಿ, ಉಮಾಮಹೇಶ್ವರ, ಮಹಿಷಮರ್ಧಿನಿ, ಸಪ್ತಮಾತೃಕೆಯರು, ಸೂರ್ಯನಾರಾಯಣ, ಕಾಲಭೈರವ, ದಕ್ಷಿಣಮೂರ್ತಿ, ವೀರಭದ್ರ–ಭದ್ರಕಾಳಿ ಮುಂತಾದ ಶಿವಪಂಚಾಯನಕ್ಕೆ ಸೇರಿದ ವಿಗ್ರಹಗಳನ್ನೂ ಸುಮಾರು ಅರವತ್ತೊಂದು ಲಿಂಗಗಳನ್ನೂ, ಪ್ರತಿ ಲಿಂಗದ ಎದುರಿಗೂ ಒಂದೊಂದು ಬಸವನನ್ನೂ, ಹನ್ನೆರಡು ಗಣಪತಿ ವಿಗ್ರಹಗಳನ್ನೂ, ಐದು ಸುಬ್ರಹ್ಮಣ್ಯ ವಿಗ್ರಹಗಳನ್ನೂ ಹಾಗೂ ಸರಸ್ವತಿ ವಿಗ್ರಹವನ್ನೂ ಇಲ್ಲಿ ಕಾಣಬಹುದಾಗಿದೆ.

ಆಲಯದ ಹೊರ ಪ್ರಾಕಾರದ ನಾಲ್ಕು ದಿಕ್ಕಿನ ಗೋಡೆಗಳ ಮೇಲೆ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿತವಾದ ಅಲಂಕಾರಿಕ ಚಿಕ್ಕ ಗೋಪುರಗಳ ಕೋಷ್ಠ ಸುತ್ತುವರಿದಿದೆ. ಪ್ರತಿಯೊಂದು ಕೋಷ್ಠದ ಒಳಗೂ ಇರುವ ಶೈವಮೂರ್ತಿಗಳು ಶಿಲ್ಪದ ದೃಷ್ಟಿಯಿಂದ ಮಹತ್ವದ್ದಾದ ದೇವಮೂರ್ತಿಗಳಾಗಿವೆ. ಅಷ್ಟದಿಕ್ಪಾಲಕರು, ನಾರಾಯಣ, ಬ್ರಹ್ಮ, ವೀರಭದ್ರ, ಚಾಮುಂಡೇಶ್ವರಿ, ಭೈರವ, ಹದಿನಾರು ವಿವಿಧ ಭಂಗಿಗಳ ಸುಬ್ರಹ್ಮಣ್ಯ, ಏಳು ರೀತಿಯ ತಾಂಡವೇಶ್ವರ, ಹತ್ತು ಮಾದರಿಯ ದಕ್ಷಿಣಾಮೂರ್ತಿ, ಇಪ್ಪತ್ತೈದು ಲೀಲಾಮೂರ್ತಿಗಳು, ಮೂವತ್ತನಾಲ್ಕು ವಿನ್ಯಾಸದ ಗಣಪತಿಗಳು, ಸಪ್ತಮಾತೃಕೆಯರು ಮುಂತಾದ ವೈವಿಧ್ಯಮಯ ಗಾರೆಶಿಲ್ಪಗಳಿವೆ. ಅಪೂರ್ವ ವಿನ್ಯಾಸದಿಂದ ಕೂಡಿದ

ಇವು ಆಲಯಕ್ಕೆ ಬಾಹ್ಯ ಆಕರ್ಷಣೆಯನ್ನು ನೀಡುವುದರ ಜೊತೆಗೆ ಕಲಾಶೈಲಿಯಿಂದ ಆಲಯದ ಆಂತರಿಕ ಮಹತ್ವವನ್ನೂ ಹೆಚ್ಚಿಸಿವೆ. ಆಲಯದಲ್ಲಿ ಒಟ್ಟು ಐದು ವಿಮಾನ ಹಾಗೂ ಎರಡು ಮಹಾಗೋಪುರಗಳಿವೆ. ನಂಜುಂಡೇಶ್ವರನ ವಿಮಾನದ ಎಡ ಮತ್ತು ಬಲ ಭಾಗದಲ್ಲಿ ಎರಡು ಬಿಲ್ವ ವೃಕ್ಷಗಳು ಬೆಳೆದಿವೆ. ಪಾರ್ವತಿ ಗುಡಿಯ ಬಲಪಕ್ಕದ ಬೆಳಕಿಂಡಿಯ ಮೂಲಕ ನೋಡಿದರೆ ಎಡಭಾಗದ ವೃಕ್ಷ ಕಾಣಿಸುತ್ತದೆ. ಇದರ ದರ್ಶನದಿಂದ ಆಶ್ಚರ್ಯ, ಆನಂದಗಳ ಜೊತೆಗೆ ಅಲೌಕಿಕವಾದ ಅನುಭೂತಿಯನ್ನು ಜನ ಪಡೆಯುತ್ತಾರೆ.

**ಲೋಹ ವಿಗ್ರಹಗಳು :** ನಂಜನಗೂಡು ಆಲಯದಲ್ಲಿ ಸುಮಾರು ತೊಂಭತ್ತೊಂದು ಲೋಹ ವಿಗ್ರಹಗಳನ್ನು ನೋಡಬಹುದು. ಇವುಗಳಲ್ಲಿ ಹೆಚ್ಚು ಬಳಕೆಯಲ್ಲಿರುವುದು ಅಸ್ತ್ರಮೂರ್ತಿ, ಚಂದ್ರಶೇಖರ–ಪಾರ್ವತಿ ಮತ್ತು ಉಮಾಮಹೇಶ್ವರ ವಿಗ್ರಹಗಳು. ತಾಂಡವೇಶ್ವರ–ಶಿವಕಾಮಿನಿ ವಿಗ್ರಹಗಳು ನಟರಾಜನ ಪ್ರತಿರೂಪವಾಗಿ ನಿತ್ಯಪೂಜೆ ಪಡೆಯುತ್ತಿವೆ. ಗಣಪತಿ, ದೇವಸೇನಾ–ಸುಬ್ರಹ್ಮಣ್ಯ–ವಲ್ಲಿದೇವಿ, ಮನೋನ್ಮಣಿ, ಚಂಡಿಕೇಶ್ವರ ವಿಗ್ರಹಗಳು ಹಬ್ಬ, ಜಾತ್ರೆಗಳ ವೇಳೆಯಲ್ಲಿ ರಥಗಳನ್ನೇರುತ್ತವೆ. ಉಳಿದಂತೆ ೬೩ ಪುರಾತನರ ಲೋಹ ವಿಗ್ರಹಗಳು ಕಳಲೆ ನಂಜರಾಜಯ್ಯನ ಕೊಡುಗೆಯಾಗಿ ದೇವಾಲಯದ ಅಮೂಲ್ಯ ಆಸ್ತಿಯಾಗಿವೆ.

**ಆಭರಣಗಳು :** ನಂಜುಂಡೇಶ್ವರನ ಆಲಯಕ್ಕೆ ಸುಮಾರು ಹದಿನೈದನೇ ಶತಮಾನದಿಂದಲೂ ಗ್ರಾಮ ದತ್ತಿಗಳು ಹೇರಳವಾಗಿ ಬಂದಿದ್ದರೂ ಆಭರಣಗಳ ವಿಷಯದಲ್ಲಿ ಯಾವುದೇ ಸೂಚನೆಗಳಿಲ್ಲ. ಕಠಾಚೂರಿ ನಂಜರಾಜಯ್ಯನು ಆಭರಣಗಳನ್ನು ನೀಡಿರುವ ಸಾಧ್ಯತೆ ಇದೆಯಾದರೂ ಈಗಿರುವ ಆಭರಣಗಳಲ್ಲಿ ಯಾವುದೊಂದೂ ಅವನ ಹೆಸರನ್ನು ಹೇಳುವುದಿಲ್ಲ. ಟಿಪ್ಪು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕೋಟ್ಯಾಂತರ ರೂಪಾಯಿ ಮೌಲ್ಯದ ಆಭರಣಗಳು ಇಲ್ಲಿಗೆ ಹರಿದು ಬಂದಿವೆ.

ಮೂಲನಂಜುಂಡೇಶ್ವರಲಿಂಗಕ್ಕೆ ಭಸ್ಮ ಲೇಪಿಸಿ ಆಕಾರ ತಿದ್ದುವುದು ಸಹಜ ಅಲಂಕಾರವಾದರೆ ಮತ್ತೊಂದು ರೀತಿಯಲ್ಲಿ ಬೆಳ್ಳಿ ಮುಖವಾಡಗಳನ್ನೂ, ನಾಗಾಭರಣ ಗಳನ್ನೂ ಧರಿಸುತ್ತಾರೆ. ನಾಲ್ಕು ಬೆಳ್ಳಿ ಕೊಳಗಗಳು, ಬೆಳ್ಳಿ ಮುಕ್ಕಣ್ಣ ಪಟ್ಟಿ, ಬೆಳ್ಳಿ ರುದ್ರಾಕ್ಷಿಮಾಲೆಗಳನ್ನು ದಿನನಿತ್ಯದ ಉಪಯೋಗಕ್ಕೆ ಬಳಸುತ್ತಾರೆ. ಪಾರ್ವತಿ ವಿಗ್ರಹಕ್ಕೆ ಬೆಳ್ಳಿಯ ಅಭಯ, ವರದ ಹಸ್ತಗಳು, ಬೆಳ್ಳಿ ಕಿರೀಟ, ಬೆಳ್ಳಿ ಡಾಬು, ದೊಡ್ಡ ತಾಳಿಸರಗಳನ್ನು ನಿತ್ಯ ಧರಿಸುತ್ತಾರೆ.

ಹಬ್ಬ, ಜಾತ್ರೆ, ಉತ್ಸವ ಮುಂತಾದ ಸಂದರ್ಭಗಳಲ್ಲಿ ವಿಶೇಷ ಅಲಂಕಾರಕ್ಕೆಂದೆ ವಿಶಿಷ್ಟ ಆಭರಣಗಳನ್ನು ಕಾಯ್ದಿರಿಸಲಾಗಿದೆ. ಮೂಲ ನಂಜುಂಡೇಶ್ವರಲಿಂಗಕ್ಕೆ ಚಿನ್ನದ ಕೊಳಗ, ಬೆಳ್ಳಿ ಮುಖವಾಡ, ವಿಶೇಷವಾದ ನಾಗಾಭರಣಗಳಿದ್ದರೆ, ಪಾರ್ವತಿ ವಿಗ್ರಹಕ್ಕೆ ಚಿನ್ನದ ಹರಳಿನ ಕಿರೀಟ, ಚಿನ್ನ ಮತ್ತು ಕೆಂಪಿನ ಅಭಯ–ವರದ ಹಸ್ತಗಳು, ಚಿನ್ನದ

ಕಾಲಂದುಗೆ, ಚಿನ್ನದ ಡಾಬು, ಚಿನ್ನದ ಕಂಠೀಹಾರ, ನಕ್ಷತ್ರ ಮಾಲಿಕಾ (ದೇವಿಸ್ತೋತ್ರವಿರುವ ಇಪ್ಪತ್ತೈದು ಪದಕಗಳ ಹಾರ) ಮುಂತಾದವುಗಳಿಂದ ಅಲಂಕರಿಸುತ್ತಾರೆ.

ಉತ್ಸವಮೂರ್ತಿಯ ಅಲಂಕಾರ ಆಭರಣಗಳು ಹೆಚ್ಚಿನ ಮಹತ್ವ ಪಡೆದಿವೆ. ಶ್ರೀಕಂಠಮುಡಿ (ಪಚ್ಚೆ ಕೆಂಪಿನ ಕಿರೀಟ), ಹರಳಿನ ವಜ್ರಾಂಗಿ, ಚಿನ್ನದ ಕಿರೀಟಗಳು, ಪಚ್ಚೆ ಕೆಂಪಿನ ಪರಶು, ಅರುಣ, ಅಭಯ ಮತ್ತು ವರದ ಹಸ್ತಗಳು, ನವರತ್ನದ ಕತ್ತಿ, ಪಚ್ಚೆ ಮಕರ ಕಂಠೀಹಾರ, ಸಾತಲಾಡಿ (ಪದಕವಿರುವ ಏಳೆಳೆಯ ಮುತ್ತಿನ ಹಾರ), ಮುತ್ತಿನ ಪಾಡಗ (ಕಾಲಿನ ಕಂಕಣ), ತೋಡ, ಲಪ್ಪ (ಹಣೆಪಟ್ಟಿ), ಸೂರ್ಯಬಟ್ಟು, ಚಂದ್ರಬಟ್ಟು, ಹಣೆಬಟ್ಟು, ಮುತ್ತಿನ ತುರಾಯಿ, ಕೆಂಪು ಮುತ್ತಿನ ಓಲೆ, ಪದಕವಿರುವ ಕಮಲದ ಹಾರ, ಕೆಂಪು ಮುತ್ತಿನ ಪದಕದ ಹಾರ, ಚಿನ್ನದ ಬಿಲ್ವಪತ್ರೆ, ರುದ್ರಾಕ್ಷಿ ಸರಗಳು, ಚಿನ್ನದ ಗರಿ(ಸೆರಗಿನ ಕುಚ್ಚು), ಚಿನ್ನದ ಗೆಜ್ಜೆ, ಜಡೆಬಿಲ್ಲೆ ಮುಂತಾದ ಆಭರಣಗಳಿಂದಾಗಿ ಉತ್ಸವಮೂರ್ತಿಗಳು ಹಬ್ಬ–ಜಾತ್ರೆ–ಉತ್ಸವಗಳ ಕಾಲದಲ್ಲಿ ವಿಶೇಷ ಮೆರುಗನ್ನು ಪಡೆದುಕೊಳ್ಳುತ್ತವೆ.

**ವಾಹನಗಳು :** ನಂಜುಂಡೇಶ್ವರ ಆಲಯದಲ್ಲಿ ಕುದುರೆ, ವೃಷಭ, ಆನೆ ಮುಂತಾದ ಪ್ರಾಣಿ ವಾಹನಗಳನ್ನೂ, ಗರುಡ, ಹಂಸ ಮುಂತಾದ ಪಕ್ಷಿ ವಾಹನಗಳನ್ನೂ, ಕೈಲಾಸ ವಾಹನ, ಭೂತವಾಹನಗಳಂತಹ ಕಾಲ್ಪನಿಕ ವಾಹನಗಳನ್ನೂ ನೋಡಬಹುದು. ಈ ವಾಹನಗಳು ಮರ, ಬೆಳ್ಳಿ, ಮತ್ತಿತರ ಲೋಹಗಳಿಂದ ನಿರ್ಮಿತವಾಗಿವೆ. ಬೆಳ್ಳಿಯ ಚಿಕ್ಕ ಆನೆ ವಾಹನ, ನಂದಿವಾಹನ, ಕುದುರೆ ವಾಹನ, ಹಂಸವಾಹನಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನಿಕರು ಮತ್ತು ಸಂಬಂಧಿಕರು ನೀಡಿದ್ದರೆ ಬೆಳ್ಳಿಪಲ್ಲಕ್ಕಿಯನ್ನು ಸ್ವತ: ಮಹಾರಾಜರೇ ನಿರ್ಮಿಸಿಕೊಟ್ಟಿರುತ್ತಾರೆ. ಈಗ ಹೆಚ್ಚಾಗಿ ಈ ವಾಹನಗಳನ್ನೇ ಬಳಸಿಕೊಳ್ಳುತ್ತಿದ್ದಾರೆ. ಇವುಗಳಿಗಿಂತ ದೊಡ್ಡದಾದ ಮರದ ನಂದಿವಾಹನ, ಗರುಡ ವಾಹನ, ಸರ್ಪವಾಹನ, ಭೂತವಾಹನ, ಕುದುರೆವಾಹನ, ಹಂಸವಾಹನಗಳನ್ನು ಬಸವನಕಟ್ಟೆಯ ಎಡಭಾಗದಲ್ಲಿ ಇಡಲಾಗಿದೆ. ಇವುಗಳಲ್ಲದೆ ಅರಮನೆ ಮುಂದಿರುವ ಆಲಯದ ವಾಹನ ಮಂಟಪದಲ್ಲಿ ಅತಿ ದೊಡ್ಡ ವಾಹನಗಳಾದ ಗಜರಥ, ಕುದುರೆವಾಹನ, ಬೆಳ್ಳಿ ಕೈಲಾಸ ವಾಹನಗಳನ್ನು ಇಡಲಾಗಿದೆ.

**ರಥಗಳು :** ನಂಜುಂಡೇಶ್ವರನ ಜಾತ್ರೆಯ ಮುಖ್ಯ ಆಕರ್ಷಣೆ ಎಂದರೆ ಇಲ್ಲಿನ ಪಂಚರಥಗಳು. ದೊಡ್ಡರಥ ಸುಮಾರು ತೊಂಭತ್ತು ಅಡಿ ಎತ್ತರವಿದ್ದರೆ ಚಿಕ್ಕರಥ ಸುಮಾರು ನಲವತ್ತು ಅಡಿ ಎತ್ತರವಿದೆ. ಅಲ್ಲದೆ ಇತ್ತೀಚೆಗೆ ಸುಮಾರು ೪೦ ಅಡಿ ಎತ್ತರದ ಬೆಳ್ಳಿ ರಥವನ್ನೂ ಮಾಡಿಸಲಾಗಿದೆ. ದೊಡ್ಡರಥ ಮತ್ತು ಅಮ್ಮನವರ ರಥಗಳೆರಡೂ ಪುರಾತನವಾದವು. 'ಗೌತಮ ರಥ'ಗಳೆಂದೇ ಪ್ರಸಿದ್ಧವಾಗಿವೆ. ೧೮೧೯ರಲ್ಲಿ ಈ ರಥಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಜೀರ್ಣೋದ್ಧಾರ ಮಾಡಿಸಿರುವ ಸಂದರ್ಭದಲ್ಲಿಯೂ 'ಗೌತಮರು ಮಾಡಿಸಿದ ರಥವು ಶಿಥಿಲವಾಗಿದ್ದು ಈ ದಿವಸ ಮಾಡಿಸಿದುದರ ಸೇವೆ' ಎಂದೇ ಹೇಳಲಾಗಿದೆ. ನಂತರವೂ ಈ ರಥಗಳು ಅನೇಕ ಸಲ ಜೀರ್ಣೋದ್ಧಾರವಾಗಿವೆ.

ಈ ರಥಗಳ ಬೃಹತ್ ಭಾರವನ್ನೆಲ್ಲಾ ಚಕ್ರಗಳೇ ಹೊರಬೇಕಾಗಿರುವುದರಿಂದ ಚಕ್ರಗಳು ಬೇಗ ಶಿಥಿಲವಾಗುತ್ತವೆ. ಸುಮಾರು ಹದಿನೈದು ವರುಷಗಳಿಗೊಮ್ಮೆ ಚಕ್ರಗಳನ್ನು ಬದಲಾಯಿಸಲಾಗುತ್ತದೆ. ಈ ರಥಚಕ್ರಗಳನ್ನು ಇಲ್ಲಿಗೆ ಸಮೀಪದ ಮುಳ್ಳೂರು ಗ್ರಾಮದ ಬಡಗಿಗಳು ಮಾಡುತ್ತಾರೆ. ಚಕ್ರಗಳ ಮೇಲೆ ಕೆತ್ತಿದವರ ಹೆಸರೂ ದಾಖಲಾಗಿದೆ. ರಥಗಳಿಗೆ ನಾಲ್ಕು ಚಕ್ರಗಳಿರುವುದು ಸಾಮಾನ್ಯವಾದರೂ ದೊಡ್ಡ ರಥ ಮತ್ತು ಪಾರ್ವತಿ ರಥಗಳಿಗೆ ಆರು ಚಕ್ರಗಳಿವೆ. ಇವುಗಳನ್ನು ಮಾಮೂಲಿ ಚಕ್ರಗಳಂತಲ್ಲದೆ (ಅರಗಳ ಬದಲಿಗೆ) ಮರದ ಗಟ್ಟಿ ಹಲಗೆಗಳನ್ನು ವೃತ್ತಾಕಾರದ ಲೋಹದ ಪಟ್ಟಿಗೆ ಬಂಧಿಸಿ ಮಾಡಲಾಗಿದೆ. ಈ ಚಕ್ರಗಳ ವ್ಯಾಸ ಸುಮಾರು ಹತ್ತು ಅಡಿಗಳಷ್ಟಿದೆ.

ರಥಪೀಠದ ಹೊರ ಭಾಗಗಳಲ್ಲಿ ವಿವಿಧ ಪ್ರಾಣಿಗಳ ಮತ್ತು ಮನುಷ್ಯರ ನಗ್ನರೂಪದ, ಮಿಥುನ ರೂಪದ ಗೊಂಬೆಗಳನ್ನು ಅಸರೆಯಾಗಿ ಎಂಬಂತೆ ನಿಲ್ಲಿಸಲಾಗಿದೆ. ಅಲ್ಲದೇ ಸುತ್ತಲೂ ವಿವಿಧ ಅಂತಸ್ತುಗಳ ನಡುವೆ ಆನೆಸಾಲು, ಕುದುರೆಸಾಲು ಮತ್ತು ಮಿಥುನ ಶಿಲ್ಪಗಳನ್ನು ಕೆತ್ತಲಾಗಿದೆ. ರಥದ ಮಧ್ಯಭಾಗದಲ್ಲಿ ದೇವರನ್ನು ಕೂರಿಸಲು ಶಾಶ್ವತವಾದ ಇಪ್ಪತ್ತು ಅಡಿಗಳಷ್ಟು ಎತ್ತರದ ದೊಡ್ಡ ಮಂಟಪವನ್ನು ಜೋಡಿಸಲಾಗಿದೆ. ಅಲ್ಲಿಯೇ ಅರ್ಚಕರು, ವಾದ್ಯದವರು ಮತ್ತು ಕಾಮಾಟಿಗಳು ಕುಳಿತುಕೊಳ್ಳುವ ವ್ಯವಸ್ಥೆ ಇದೆ.

ರಥದ ಮೇಲ್ಭಾಗವನ್ನು ರಥಪೀಠದ ಆಸರೆಯಲ್ಲಿ ಸುಮಾರು ನಲವತ್ತು ಅಡಿ ಎತ್ತರದ ನಾಲ್ಕು ಪನ್ನೇಮರಗಳನ್ನು ನಿಲ್ಲಿಸಿ ಅವುಗಳ ಸುತ್ತಾ ಇಪ್ಪತ್ನಾಲ್ಕು ದಟ್ಟಗಳನ್ನೂ, ತೊಂಭತ್ತೆರಡು ಹಚ್ಚೆಗಳನ್ನೂ ಕಟ್ಟಿ ಅದರೊಳಕ್ಕೆ ಉರ್ಜಿ(ಹಗ್ಗ)ಯನ್ನು ತುಂಬಿ ಸಿದ್ಧಗೊಳಿಸುತ್ತಾರೆ. ನಂತರ ಹೊರಭಾಗಕ್ಕೆ ಬಣ್ಣ ಬಣ್ಣದ ಬಾವುಟಗಳನ್ನು ತುದಿಯವರೆಗೂ ಸುತ್ತುತ್ತಾರೆ. ಎರಡೂ ದಿಕ್ಕುಗಳಿಗೆ ಬೃಹತ್ ಬಟ್ಟೆ ಬಾವುಟ ಕಟ್ಟುತ್ತಾರೆ. ತುದಿಗೆ ಸುಮಾರು ಹನ್ನೆರಡು ಅಡಿ ಉದ್ದ ಮತ್ತು ಆರು ಅಡಿ ವ್ಯಾಸದ ನಾಲ್ಕು ಹಿತ್ತಾಳೆಯ ಛತ್ರಿಗಳನ್ನು ಕಟ್ಟಿ ತುತ್ತತುದಿಯಲ್ಲಿ ಕಳಸ ಇಡುತ್ತಾರೆ. ಹೀಗೆ ಕಾಮಾಟಿಗಳಿಂದ ಸಿದ್ಧಗೊಂಡ ರಥ ಸುಮಾರು ತೊಂಭತ್ತಾರು ಅಡಿಗಳಷ್ಟು ಎತ್ತರ ಇದ್ದು ಆಲಯದ ಗೋಪುರಕ್ಕೆ ಸರಿಸಮವೆನ್ನುವಂತೆ ನಿಲ್ಲುತ್ತದೆ. ಈ ರಥದ ಮುಂಭಾಗದಲ್ಲಿ, ನಾಲ್ಕು ಕುದುರೆಗಳು ಬ್ರಹ್ಮನ ಸಾರಥ್ಯದಲ್ಲಿ ರಥವನ್ನೆಳೆಯುತ್ತಿವೆಯೆಂಬ ಭಾವನೆ ಬರುವಂತೆ ಬ್ರಹ್ಮ ಮತ್ತು ಕುದುರೆಗಳ ಮರದ ಶಿಲ್ಪವನ್ನು ಜೋಡಿಸುತ್ತಾರೆ. ಈ ರಥವನ್ನು ಎಳೆಯಲು ಸುಮಾರು ತೊಂಭತ್ತು ಮಾರು ಉದ್ದದ, ಒಂದು ಗೇಣು ದಪ್ಪದ ಉರ್ಜಿಯನ್ನು ಬಳಸುತ್ತಾರೆ. ರಥ ಎಳೆಯಲು ಸಹಸ್ರಾರು ಜನರು ಕೈಹಾಕಿದರು ರಥ ಜಗ್ಗದೆ ನಿಂತರೆ ಅದನ್ನು ಮುಂದೂಡಲು ಆನೆಯ ನೆರವನ್ನೂ ಪಡೆದುಕೊಳ್ಳಲಾಗುತ್ತದೆ.

ಉಳಿದ ನಾಲ್ಕು ರಥಗಳ ಅಲಂಕಾರವೂ ಹೀಗೆ ಇರುತ್ತದಾದರೂ ಮೂರು ಆಯಾಮಗಳಲ್ಲೂ ಅವುಗಳ ವಿಸ್ತೀರ್ಣ ಕಡಿಮೆ ಆಗುತ್ತದೆ. ಚಿಕ್ಕರಥವನ್ನು ಪ್ರತಿ ಹುಣ್ಣಿಮೆ ಮತ್ತಿತರ ಹಬ್ಬಗಳಲ್ಲಿ ನಡೆಯುವ ರಥೋತ್ಸವಗಳಲ್ಲೂ ಬಳಸಿಕೊಳ್ಳುತ್ತಾರೆ.

ನಂಜನಗೂಡಿನ ಇತರ ದೇವಾಲಯಗಳು ಇತಿಹಾಸ ಪರಂಪರೆಯ ಹಿನ್ನೆಲೆ ಪಡೆದುಕೊಂಡಿವೆ. ಕಪಿಲಾ ನದಿದಡದಲ್ಲಿನ ರಾಮೇಶ್ವರ ದೇವಾಲಯ ಗಂಗಶೈಲಿಯದು. ಶಿಥಿಲವಾಗಿದ್ದ ಈ ದೇವಾಲಯವನ್ನು ಈಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಗೌರಿಘಟ್ಟದ ಬೀದಿಯಲ್ಲಿನ ಕಪಿಲಮಲ್ಲಿಕಾರ್ಜುನ ದೇವಾಲಯವು ಚೋಳ ಶೈಲಿಯಲ್ಲಿದ್ದು, ಆಲಯದ ವಿಶಾಲವಾದ ಪ್ರಾಂಗಣ ಮನ ಸೆಳೆಯುತ್ತದೆ. ಕಾಶೀ ವಿಶ್ವನಾಥ ಗುಡಿಯು ವಿಜಯನಗರ ಆರಂಭಕಾಲದ ವಾಸ್ತುಶೈಲಿಯಲ್ಲಿದೆ. ಮರಳುಘಟ್ಟದ ಸಮೀಪದಲ್ಲಿರುವ ಲಿಂಗಾಭಟ್ಟರ ಗುಡಿಯನ್ನೂ ಲಿಂಗಾಭಟ್ಟನೆಂಬ ಬ್ರಾಹ್ಮಣನು, ತಾನು ಅಪಕರ್ಮ ವೃತ್ತಿಯಿಂದ ಪಡೆದ ದಕ್ಷಿಣೆಯಿಂದ ಕಟ್ಟಿಸಿದ್ದನೆಂಬ ಪ್ರತೀತಿ ಇದೆ. ಸತ್ಯನಾರಾಯಣ ಗುಡಿ ಹಾಗೂ ಅಂಗಡಿಬೀದಿಯಲ್ಲಿನ ಕನ್ಯಕಾಪರಮೇಶ್ವರಿ ಗುಡಿ ಕೂಡ ಮೈಸೂರು ಅರಸರ ಕಾಲದಲ್ಲಿ ನಿರ್ಮಿತವಾಗಿದ್ದಿರಬಹುದು. ಶಿಥಿಲವಾಗಿದ್ದ ಇದನ್ನು ಈಗ ಜೀರ್ಣೋದ್ಧಾರ ಮಾಡಿದ್ದಾರೆ. ಈಚೆಗೆ ನಿರ್ಮಿತವಾಗಿರುವ ದತ್ತಾತ್ರೇಯ ಗುಡಿಯ ವಿಶಾಲವಾದ ಪ್ರಾಕಾರ, ಆಕರ್ಷಕವಾಗಿದೆ.

ಶಬರಿಮಲೆಯ ಅಯ್ಯಪ್ಪನ ಗುಡಿಯ ಮಾದರಿಯಲ್ಲಿ ಇತ್ತೀಚೆಗೆ ನಿರ್ಮಿತವಾಗಿರುವ ಅಯ್ಯಪ್ಪನ ಗುಡಿಯು ಇಲ್ಲಿದೆ. ಕಪಿಲಾ–ಕೌಂಡಿನ್ಯ ಚೂರ್ಣಾವತಿ ನದಿಗಳ ಸಂಗಮಸ್ಥಾನಕ್ಕೆ ಕೊಂಚ ಬಲಗಡೆಗೆ ಪೂರ್ವಾಭಿಮುಖವಾಗಿ ಪರಶುರಾಮ ದೇವಾಲಯವಿದೆ. ಜನಪದ ಶೈಲಿಯ ಈ ಗುಡಿಯ ಗರ್ಭಗೃಹದಲ್ಲಿ ಶಾಸನಸ್ಥ ಪರಶುರಾಮನ ಚಿತ್ರ ಕೆತ್ತಿರುವ ವಿಗ್ರಹವಿದೆ. ಈ ಶಿಲೆಗೆ ೧೮೬೨ರಲ್ಲಿ ಪರಶುರಾಮನ ಚಿತ್ರವಿರುವ ಬೆಳ್ಳಿಕವಚವನ್ನು ಮಾಡಿಕೊಡಲಾಯಿತೆಂದು ಇಲ್ಲಿನ ಶಾಸನ ಹೇಳುತ್ತದೆ. ಗರ್ಭಗುಡಿಯ ಹಿಂದೆ ಪರಶುರಾಮನ 'ಪಾದ'ವಿದೆ. ಹರಿಸೇವೆ, ಮಣೆಸೇವೆ, ಬಲಿ ನೀಡುವುದು, ಹರಕೆ ಒಪ್ಪಿಸುವುದು– ಇಲ್ಲಿ ನಡೆಯುತ್ತವೆ.

ಚಾಮುಂಡೇಶ್ವರಿ, ಚಿಕ್ಕಮ್ಮ, ಚಿಕ್ಕದೇವಿ, ಮಾರಮ್ಮ, ಹನುಮಂತ, ಬಸವಣ್ಣ, ಸಿದ್ಧಪ್ಪಾಜಿ ಹಾಗೂ ಗಣೇಶನ ಗುಡಿಗಳು ನಂಜನಗೂಡಿನಲ್ಲಿರುವ ಇತರೇ ಆಲಯಗಳಾಗಿವೆ. ಇಲ್ಲಿರುವ ಶ್ರೀ ರಾಘವೇಂದ್ರಮಠ ೧೬೬೩ಕ್ಕೂ ಮೊದಲಿನಿಂದಲೇ ಇರುವುದಕ್ಕೆ ಶಾಸನಾಧಾರಗಳಿವೆ. ಈಗ ಜನಸಾಮಾನ್ಯರ ಆರಾಧ್ಯದೈವವಾಗಿರುವ 'ಶ್ರೀ ರಾಘವೇಂದ್ರ ಯತಿಗಳು' ಈ ಮಠದಲ್ಲಿ ಆಚಾರ್ಯರಾಗಿದ್ದ ಅಂಶ ಮಠಕ್ಕೆ ಮತ್ತಷ್ಟು ಮೌಲ್ಯವನ್ನು ತಂದುಕೊಟ್ಟಿದೆ. ಅಲ್ಲದೆ ಆಧುನಿಕ ಕಾಲಕ್ಕೆ ಸೇರಿದ ಗುಡಿ, ಮಸೀದಿ ದರ್ಗಾ ಹಾಗೂ ಚರ್ಚುಗಳೂ ಇಲ್ಲಿವೆ.

**ನಂದಿಗುಂದ (೮೪೭) :** ನಂಜನಗೂಡಿಗೆ ಸಮೀಪವಿರುವ ಇದು ಚೋಳರ ಕಾಲದಲ್ಲಿ (೧೦೨೧) ನಿರ್ಮಾಣಗೊಂಡಿರುವ ಮಲ್ಲೇಶ್ವರ ಗುಡಿಯಿಂದಾಗಿ ಮಹತ್ವ ಪಡೆದಿದೆ. ಮಲ್ಲೇಶ್ವರ ಗುಡಿ ಮುಂದಿರುವ ೧೦೨೧ ತಮಿಳು ಶಾಸನದಲ್ಲೂ ಇದು 'ನನ್ದಿಗುನ್ದ' ಎಂದೇ ದಾಖಲಾಗಿದ್ದು ಹಿಂದೆ ಮೈಯ್ಯುನಾಡಿನಲ್ಲಿದ್ದ ಈ ಗ್ರಾಮದ ಮಲ್ಲಿಗೌಂಡ, ಕುಂಬಯ್ಯ ಹಾಗೂ ಎರೆಯಮ್ಮರು ಈ ಗುಡಿಯನ್ನು ನಿರ್ಮಿಸಿದಾಗ ಮಲ್ಲಿಗಾವುಂಡನು

ಭೂಮಿ ಹಾಗೂ ಕಲ್ಯಾಣಗಳನ್ನು ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಬಾವಿಯೊಂದರ ಬಳಿಯಿರುವ ಸುಮಾರು ೧೨ನೇ ಶತಮಾನದ ಶಾಸನ ವೀರದಾಸ ಮಸಣಗೌಡನು ಮಲ್ಲೇಶ್ವರ ಗುಡಿ ನಿರ್ಮಿಸಿ ದತ್ತಿ ಬಿಟ್ಟಿದ್ದನ್ನು ದಾಖಲಿಸಿದರೆ, ೧೨೦೪ರ ಇನ್ನೊಂದು ತಮಿಳು ಶಾಸನ – ಮಹಾದೇವರ ನಂದಾದೀಪಕ್ಕೆಂದು ಕಲ್ಯಾಣವನ್ನು ದತ್ತಿ ನೀಡಿದ್ದನ್ನು ದಾಖಲಿಸುತ್ತದೆ.

**ಬದನವಾಳು (೨೭೫೯) :** ನಂಜನಗೂಡಿನಿಂದ ಸುಮಾರು ೧೬ ಕಿ.ಮೀ. ದೂರದಲ್ಲಿರುವ ಇಲ್ಲಿಂದ ವರದಿಯಾಗಿರುವ ಮೂರು ಹೊಯ್ಸಳ ಶಾಸನಗಳಲ್ಲಿ ಮಹಾಲಿಂಗೇಶ್ವರ ಗುಡಿ ಮುಂದಿರುವ ೧೨೨೮ರ ಶಾಸನ ಹೊಯ್ಸಳ ಸೋಮೇಶ್ವರನು ಚೋಳರಾಜ್ಯದ ಕಣ್ಣಾನೂರಿನಿಂದ ಆಳುತ್ತಿದ್ದಾಗ, ಶ್ರೀಗಂಗಾಪುರವಾದ ಬಣವಾಳದ ಮೂಲಸ್ಥಾನ ದೇವರು ಹಾಗೂ ನೊಳಂಬೇಶ್ವರ ದೇವರಿಗೆ ಪ್ರಭುಗೌಡಗಳು ಆರು ಗದ್ಯಾಣದ ಆಯದಿಂದ ಪೂಜೆಗೆ ವ್ಯವಸ್ಥೆ ಮಾಡಿದ್ದನ್ನು ದಾಖಲಿಸಿದರೆ, ಅಲ್ಲೇ ಇರುವ ೧೨೪೯ರ ಇನ್ನೊಂದು ಶಾಸನ ಬಹಳ ಹಾಳಾಗಿದ್ದು ವಿವರ ಲಭ್ಯವಿಲ್ಲ. ವಿಜಯಮ್ಮನ ಗುಡಿ ಮುಂದಿರುವ ೧೩೯೯ರ ವೀರಗಲ್ಲು ಶಾಸನ ಮಡಿದ ದೊಡ್ಡ ತಮ್ಮಣ್ಣನಿಗೆಂದು ವೀರಗಲ್ಲು ನಿಲ್ಲಿಸಿದ್ದನ್ನು ದಾಖಲಿಸುತ್ತದೆ. ಇಲ್ಲಿಯ ಮಹಾಲಿಂಗೇಶ್ವರ ಗುಡಿಯು ಹೊಯ್ಸಳರ ಕಾಲದ ರಚನೆಯಾಗಿದ್ದು, ಶಾಸನದಲ್ಲಿ ಅದನ್ನು ಮೂಲಸ್ಥಾನ ದೇವರೆಂದು ಕರೆಯಲಾಗಿದೆ.

**ಮಣ(ರ)ಳೂರು (೨,೩೨೨) :** ನಂಜನಗೂಡಿನಿಂದ ಸುಮಾರು ೧೨ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ವರದಿಯಾಗಿರುವ ಮೂರು ಶಾಸನಗಳಲ್ಲಿ ಒಂದು ಚೋಳ ಕುಲೋತ್ತುಂಗನ ಕಾಲಕ್ಕೆ ಸೇರಿದ ಕಲ್ಯಾಣ ಶಾಸನವಾಗಿದ್ದು, ಶಂಭುಲಿಂಗೇಶ್ವರ ಗುಡಿ ಮುಂದಿರುವ ೧೨೩೧ರ ಶಾಸನ, ಏಳೂರುಗಳ ಭೂಮಿಕಾರರಾದ ಆಚಾರಿಗಳು ಕೇತಮ್ಮನ ಹೆಸರಲ್ಲಿ ದೇವಾಲಯವನ್ನು ನಿರ್ಮಿಸಿ ದತ್ತಿ ನೀಡಿದ್ದನ್ನು ದಾಖಲಿಸುತ್ತದೆ. ಇಲ್ಲಿಯ ಶಂಭುಲಿಂಗೇಶ್ವರ, ಶಾಸನೋಕ್ತ ಕೇತಮೇಶ್ವರ ಗುಡಿಯಾಗಿದ್ದು, ಹೊಯ್ಸಳ ಲಕ್ಷಣದಿಂದ ಕೂಡಿದೆ.

**ಮೂಡಹಳ್ಳಿ (೧೮೪೪) :** ನಂಜನಗೂಡಿನಿಂದ ಸುಮಾರು ೧೫ ಕಿ.ಮೀ. ದೂರದಲ್ಲಿರುವ ಇದೂ ಕೂಡ ಗಂಗರ ಕಾಲದ ಗ್ರಾಮವಾಗಿದ್ದು, ಇಲ್ಲಿಂದ ಈವರೆಗೆ ವರದಿಯಾಗಿರುವ ೧೦ ಶಾಸನಗಳಲ್ಲಿ ಮೂರು ಗಂಗರದಾಗಿವೆ. ಇಲ್ಲಿಯ ಮಹಾದೇವಿ ಗುಡಿ ಮುಂದಿರುವ ಇವು ಕೊಂಗುಣಿ ಅರಸ ಶಿವಮಾರ II ಹಾಗೂ ಸತ್ಯವಾಕ್ಯಪೆಮ್ಮನಡಿ ಕಾಲಕ್ಕೆ ಸೇರಿದ್ದು, ವಿವರ ಹಾಳಾಗಿದೆ. ಅಲ್ಲೇ ಇರುವ ಒಂದನೆಯ ನರಸಿಂಹನ ೧೧೭೨ರ ದತ್ತಿ ಶಾಸನದ ವಿವರ ಅಸ್ಪಷ್ಟವಾಗಿದೆ. ಆದರೆ ಇಲ್ಲಿಯ ಶಾಸನಗಳು ಅದಿನಾರ ಮಹಾಪ್ರಭುಗಳನ್ನು ಉಲ್ಲೇಖಿಸುತ್ತಿದ್ದು, ಆ ದಿನಗಳಲ್ಲಿ ಅದಿನಾರು ಹನ್ನೆರಡು ಹಳ್ಳಿಗಳನ್ನು ಹೊಂದಿದ್ದನ್ನು ತಿಳಿಸುತ್ತದೆ. ಚೆನ್ನಕೇಶವಗುಡಿ ಮುಂದಿರುವ ೧೨ನೇ ಶತಮಾನದ ಶಾಸನ ಜೈನಬಸದಿಯ ಬಗ್ಗೆ ಉಲ್ಲೇಖಿಸಿದರೆ, ಕೇತೇದೇವರ ಗುಡಿಯಲ್ಲಿರುವ ೧೦೭೭ರ ಶಾಸನ ಅದಿನಾರು–೧೨ರ ದಾಮಾಗೌಂಡನನ್ನು ಹೆಸರಿಸುತ್ತದೆ. ಇಲ್ಲಿರುವ ಸೋಮೇಶ್ವರ

ಚೆನ್ನಕೇಶವ, ಕೇತೇದೇವ ಹಾಗೂ ವೀರೇದೇವರ ಗುಡಿಗಳು ಪ್ರಾಚೀನದಾಗಿದ್ದು, ಸಂರಕ್ಷಿಸುವ ಅಗತ್ಯವಿದೆ.

**ಸಿಂಧುವಳ್ಳಿ (೩೨೮೪) :** ನಂಜನಗೂಡಿನಿಂದ ಸುಮಾರು ೧೬ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ನಾಲ್ಕು ಶಾಸನಗಳು ವರದಿಯಾಗಿವೆ. ಶಂಕರೇಶ್ವರ ಗುಡಿ ಬಳಿಯಿರುವ ೧೧೦೭ರ ತಮಿಳು ಶಾಸನ ಚೋಳಕುಲೋತ್ತುಂಗನ ಆಳ್ವಿಕೆಯಲ್ಲಿ ಕಾರೈನಾಡಿನ ಗ್ರಾಮವೊಂದರಲ್ಲಿ, ಸತ್ಯವಾಕ್ಯಗೌಂಡನು ಮೂಲಸ್ಥಾನ ದೇವರಗುಡಿ ನಿರ್ಮಿಸಿ, ಕೆರೆ ಕಟ್ಟಿಸಿ, ತೂಬನಿಕ್ಕಿಸಿ ದಾನ ಬಿಟ್ಟಿದ್ದನ್ನು ದಾಖಲಿಸಿದರೆ, ಉಳಿದ ಶಾಸನಗಳು ಹೊಯ್ಸಳ ವಿಜಯನಗರ ಕಾಲಕ್ಕೆ ಸೇರಿದ್ದು ಬಹಳ ಹಾಳಾಗಿದೆ. ಶಾಸನೋಕ್ತ ಗುಡಿಯೇ ಇಂದಿನ ಶಂಕರೇಶ್ವರ ದೇವಾಲಯವಾಗಿದ್ದು, ಸಂರಕ್ಷಿಸುವ ಅಗತ್ಯವಿದೆ.

**ಸುತ್ತೂರು (೩,೮೫೦) :** ನಂಜನಗೂಡಿನಿಂದ ೧೪ ಕಿ.ಮೀ. ಪೂರ್ವಕ್ಕೆ ಕಪಿಲಾ ತೀರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಜಗದ್ಗುರು ಶಿವರಾತ್ರೀಶ್ವರರ ಕಾರಣದಿಂದ ಪವಿತ್ರಕ್ಷೇತ್ರವೆಂಬ ಮನ್ನಣೆಯನ್ನೂ ಪಡೆದಿದೆ. ಇಲ್ಲಿಂದ ಈವರೆಗೆ ೨೫ ಶಾಸನಗಳು ವರದಿಯಾಗಿವೆ. ಇವು ಸುಮಾರು ೧೦–೧೬ನೇ ಶತಮಾನಕ್ಕೆ ಸೇರಿದ್ದು, ಸುತ್ತೂರಿನ ಇತಿಹಾಸ ತಿಳಿಯಲು ನೆರವಾಗುತ್ತವೆ. ಗಂಗ, ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಅರಸರ ಕಾಲಕ್ಕೆ ಸೇರಿವೆ. 'ಸೊತ್ತಿಯೂರು' ಅಥವಾ 'ಶ್ರೋತ್ರೀಯೂರು' ಇದರ ಪ್ರಾಚೀನ ಹೆಸರು. ಈ ಊರಿನ ಗ್ರಾಮದೇವತೆ ಸೊತ್ತಿಯೂರವ್ವೆಯ ಉಲ್ಲೇಖ ಸುತ್ತೂರಿನ ೧೦೩೨ರ ಶಾಸನದಲ್ಲಿದೆ. ಸೊತ್ತಿಯೂರವ್ವೆಯ ಗುಡಿಯಲ್ಲಿ ಗಂಗಕಾಲದ ಸಪ್ತಮಾತೃಕಾ (ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ ಮತ್ತು ಚಾಮುಂಡಿ) ವಿಗ್ರಹಗಳಿವೆ. ದೇಗುಲದ ಹೊರಗೆ ಸಣ್ಣ ಗುಡಿಯಲ್ಲಿ ಭೈರವನ ಕಿರು ವಿಗ್ರಹವೂ ಇದೆ. ಶಿಥಿಲವಾಗಿದ್ದ ಈ ಗುಡಿಯನ್ನು ಈಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ದೇಗುಲದ ಮುಖಮಂಟಪದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಇದೇ ಶಾಸನದಿಂದ ಸುತ್ತೂರಿನಲ್ಲಿದ್ದ ಈಶಾನ್ಯ ಈಶ್ವರೊಡೆಯರ ದೇಗುಲ ಹಾಗೂ ಸುತ್ತೂರಿನ ಮಾರಯ್ಯ ಸೆಟ್ಟಿಯ ಮಡದಿ ಗುಂಡಬ್ಬೆಯು ಮೂಲಸ್ಥಾನ ದೇವರಗುಡಿಯನ್ನು ನಿರ್ಮಿಸಿದ ಅಂಶವೂ ಗೊತ್ತಾಗುತ್ತದೆ. ಅಲ್ಲಿದ್ದ ಮಠಗಳ ಪ್ರಸ್ತಾಪವೂ ಇದರಲ್ಲಿದೆ.

ಇಲ್ಲಿಯ ಸೋಮೇಶ್ವರ ಗುಡಿಯು ೧೩ನೇ ಶತಮಾನದ ರಚನೆಯಾಗಿದ್ದು, ಇದನ್ನು ಅಲ್ಲಿರುವ ೧೨–೧೩ನೇ ಶತಮಾನಕ್ಕೆ ಸೇರಿದ ಹೊಯ್ಸಳ ಶಾಸನಗಳು ಖಚಿತಪಡಿಸುತ್ತವೆ. ಇದಕ್ಕೆ ದತ್ತಿ ಶಾಸನಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಇಲ್ಲಿಯ ನಾರಾಯಣಸ್ವಾಮಿ ಶಾಸನೋಕ್ತ ನಾಗಕೇಶವ ದೇವಾಲಯವನ್ನು ೧೧೬೯ರಲ್ಲಿ ಹೊಯ್ಸಳ ಒಂದನೇ ನರಸಿಂಹನ ದಂಡನಾಯಕ ಲಕ್ಷ್ಮಯ್ಯ ಕಟ್ಟಿಸಿದ್ದನೆಂದು ಶಾಸನ ಹೇಳುತ್ತದೆ. ಆದರೆ ಪೂರ್ಣ ಶಿಥಿಲವಾಗಿದ್ದ ಈ ದೇವಾಲಯದ ಕಲ್ಲು ಕಂಬಗಳನ್ನು ಮರು ಉಪಯೋಗಿಸಿಕೊಂಡು ದೇಗುಲವನ್ನು ನಂತರದಲ್ಲಿ ಪುನರ್ನಿರ್ಮಾಣ ಮಾಡಲಾಗಿದೆ. ಸುತ್ತೂರು ಮಠದ ಆವರಣದಲ್ಲಿರುವ ಸೋಮೇಶ್ವರ ದೇವಾಲಯವನ್ನು ಇವನೇ

ನಿರ್ಮಿಸಿರಬಹುದು. ತ್ರಿಕೂಟಾಚಲವಾದ ಇದರ ಪ್ರಧಾನ ಗರ್ಭಗುಡಿಯಲ್ಲಿ ಶಂಕರನಾರಾಯಣ ವಿಗ್ರಹವಿದೆ. ನಾಲ್ಕು ಕೈಗಳುಳ್ಳ ವಿಗ್ರಹದ ಬಲಭಾಗ ಈಶ್ವರನನ್ನೂ ಎಡಭಾಗ ವಿಷ್ಣುವನ್ನೂ ಸಂಕೇತಿಸುತ್ತಿದ್ದು, ಇಕ್ಕೇಲದಲ್ಲಿ ಕ್ರಮವಾಗಿ ಪಾರ್ವತಿ ಲಕ್ಷ್ಮಿಯರ ವಿಗ್ರಹಗಳಿವೆ. ಬಲಪಾರ್ಶ್ವದ ಗುಡಿಯಲ್ಲಿ ಸೋಮೇಶ್ವರಲಿಂಗ ಹಾಗೂ ಎಡಪಾರ್ಶ್ವದಲ್ಲಿ ಸಪ್ತಮಾತೃಕೆಯರ ವಿಗ್ರಹಗಳಿವೆ. ಈ ಮೂರು ಗರ್ಭಗೃಹಗಳ ಮುಂದೆ ಅರ್ಧಮಂಟಪವಿದ್ದು ಇವು ಒಂದೇ ನವರಂಗಕ್ಕೆ ತೆರೆದುಕೊಳ್ಳುತ್ತವೆ. ನವರಂಗದಲ್ಲಿ ಅತಿ ಸುಂದರವಾದ ಹೊಯ್ಸಳ ಶೈಲಿಯ ಕಂಬ ಹಾಗೂ ಭುವನೇಶ್ವರಿಯ ಕೆತ್ತನೆಗಳು ಆಕರ್ಷಕವಾಗಿವೆ.

ಸುತ್ತೂರಿಗೆ ಕೀರ್ತಿ ವೈಭವಗಳನ್ನು ತಂದುಕೊಟ್ಟಿರುವುದು ಜಗದ್ಗುರು ಶಿವರಾತ್ರೀಶ್ವರರ ಮಠ. ಸುತ್ತೂರು ಮಠವೆಂದೇ ಪ್ರಸಿದ್ಧವಾಗಿರುವ ಈ ಮಠ ಸುಮಾರು ಒಂಬತ್ತು–ಹತ್ತನೆಯ ಶತಮಾನದಲ್ಲೇ ಇದ್ದಿರಬಹುದೆಂಬ ನಂಬಿಕೆ ಇದೆ. ಈಗ ಊರಿನ ನಡುವೆ ಇರುವ ಮಠ ವಿಜಯನಗರ ಶೈಲಿಯಲ್ಲಿದೆ. ವೀರಸಿಂಹಾಸನ ಮಠದ ಶಿವರಾತ್ರಿ ಸ್ವಾಮಿಗಳ ಗದ್ದಿಗೆಯ ನಂದಿಪೀಠದ ಮೇಲಿನ ೧೫೦೩ರ ಶಾಸನದಿಂದ ಶಿವರಾತ್ರಿ ದೇವರ ಆದೇಶದಂತೆ ಲಿಂಗಣ್ಣವೊಡೆಯನು ಬಸವ ಪ್ರತಿಷ್ಠೆ ಮಾಡಿಸಿದ್ದನ್ನು ದಾಖಲಿಸಿದೆ. ಶಿವರಾತ್ರೇಶ್ವರ ಮಠದೆದುರಿರುವ ೧೫೯೩ರ ಶಾಸನ ಶಿವರಾತ್ರೆ ದೇವರ ಶಿಷ್ಯ ಚೆನ್ನಬಸವರಾಜದೇವರಿಗೆ ಹದಿನಾಡು ಪ್ರಭು ಇಮ್ಮಡಿರಾಮರಾಜನಾಯಕರು, ಹಸುರಹಳ್ಳಿ ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ. ಅದೇ ಮಠದಲ್ಲಿರುವ ೧೭೭೧ರ ತಾಮ್ರಶಾಸನದಲ್ಲಿ ಕಾಳಂಗರಿಡಿ ಮಠದ ಉಲ್ಲೇಖವಿದೆ. ಇಂದು ಸುತ್ತೂರು ಪ್ರಮುಖ ಶಿಕ್ಷಣಕೇಂದ್ರವಾಗಿ, ಕೃಷಿ ತರಬೇತಿಕೇಂದ್ರವಾಗಿ ಅದ್ಭುತವಾಗಿ ಬೆಳೆದಿದೆ. ಪ್ರತೀವರ್ಷ ಫೆಬ್ರವರಿ ತಿಂಗಳಲ್ಲಿ ಏಳು ದಿನ ನಡೆಯುವ ಶಿವರಾತ್ರೀಶ್ವರರ ಜಾತ್ರೆಯು ಉಲ್ಲೇಖಾರ್ಹವಾಗಿದ್ದು, ವಿಶೇಷ ಆಕರ್ಷಣೆಯಾಗಿದೆ.

**ಹುಲ್ಲಹಳ್ಳಿ (೮,೨೭೮) :** ನಂಜನಗೂಡಿಗೆ ೨೦ ಕಿ.ಮೀ. ದೂರದಲ್ಲಿರುವ ಇಲ್ಲಿಂದ ಈವರೆಗೆ ಹೊಯ್ಸಳ ಕಾಲದ ಎರಡು ಹಾಗೂ ೧೭ನೇ ಶತಮಾನದ ಎರಡು ಶಾಸನಗಳು ವರದಿಯಾಗಿದ್ದು ಅವುಗಳಲ್ಲೂ ಹುಲ್ಲನಹಳ್ಳಿ ಎಂದೇ ಊರ ಹೆಸರು ದಾಖಲಾಗಿದೆ. ಹೊಯ್ಸಳ ದಂಡನಾಯಕ 'ಹುಲ್ಲ'ನ ಹೆಸರಿನಲ್ಲಿ ಈ ಊರು ರೂಪುಗೊಂಡಿದೆಯೆಂಬ ಮಾತಿದ್ದು, ಇಲ್ಲಿರುವ ಹೊಯ್ಸಳ ಶೈಲಿಯ ಎರಡು ದೇವಾಲಯಗಳು ಇದಕ್ಕೆ ಸಾಕ್ಷಿಯೊದಗಿಸುವಂತಿವೆ. ಇಲ್ಲಿನ ವರದರಾಜಸ್ವಾಮಿ ದೇವಾಲಯಕ್ಕೆ ವಿಶಿಷ್ಟ ಹಿನ್ನೆಲೆ ಇದೆ. ವರದರಾಜನನ್ನು ಶಾಸನಗಳಲ್ಲಿ ಅಲ್ಲಾಳನಾಥಸ್ವಾಮಿ ಎಂದು ಕರೆಯಲಾಗಿದೆ. ರಾಜಧಾನಿ ತೆರಕಣಾಂಬಿಯಿಂದ ಆಳುತ್ತಿದ್ದ ಪದಿನಾಲ್ಕುನಾಡ ದೊರೆ ವೀರಕೇತಯ ದಣ್ಣಾಯಕನನ್ನು 'ಅಲ್ಲಾಳನಾಥ ಪಾದಪದ್ಮಾರಾಧಕ'ನೆಂದು ಇಲ್ಲಿನ ೧೩೩೨ರ ಶಾಸನ ವರ್ಣಿಸುತ್ತದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಹೊಯ್ಸಳ ಶೈಲಿಯಲ್ಲಿದ್ದರೂ ಬಳಪದ ಕಲ್ಲಿಗೆ ಬದಲಿಗೆ ಕಣಶಿಲೆಯ ಬಳಕೆಯಾಗಿರುವುದು ಗಮನಾರ್ಹ. ದ್ವಿಕೂಟಾಚಲವಾದ ಇದು ಗರ್ಭಗೃಹ, ಸುಕನಾಸಿಗಳೆರಡನ್ನೂ ಒಳಗೊಂಡ ಪ್ರದಕ್ಷಿಣಪಥ, ನವರಂಗಗಳನ್ನು ಮೂಲತಃ ಹೊಂದಿತ್ತು. ವಿಸ್ತಾರವಾದ ನವರಂಗದಲ್ಲಿರುವ

ಬಹುಕೋನದ ಕಂಬಗಳು ಆಕರ್ಷಕವಾಗಿವೆ. ಪೂರ್ವಾಭಿಮುಖವಾಗಿರುವ ಗರ್ಭಗುಡಿಗೆ ತೆರೆದುಕೊಳ್ಳುವ ನವರಂಗದಲ್ಲಿ ಮೂರು ದ್ವಾರಗಳಿದ್ದು ದಕ್ಷಿಣ ದ್ವಾರದಲ್ಲಿ ಮತ್ತೊಂದು ಗರ್ಭಗುಡಿ, ಸುಕನಾಸಿಗಳು ಕಾಣುತ್ತವೆ. ಉತ್ತರದ ಬಾಗಿಲು ಹೊರಗಿನ ಪ್ರಾಕಾರಕ್ಕೆ ತೆರೆದುಕೊಂಡಿವೆ. ಪೂರ್ವಾದ್ವಾರದಿಂದಾಚೆ ಮುಖಮಂಟಪ ಮತ್ತು ವಿಸ್ತಾರವಾದ ಪಾತಾಳಾಂಕಣಗಳಿವೆ. ಈ ಪಾತಾಳಾಂಕಣ ವಿಜಯನಗರದರಸರ ಕಾಲದಲ್ಲಿ ನಿರ್ಮಿತವಾಗಿರಬಹುದು. ಇದರ ಎರಡೂ ಕಡೆಗಳಲ್ಲಿರುವ ಗುಡಿಗಳಲ್ಲಿ, ಎಡಪಾರ್ಶ್ವದಲ್ಲಿ ವೇಣುಗೋಪಾಲ ಮತ್ತು ಕೃಷ್ಣನ ವಿಗ್ರಹಗಳೂ ಬಲಭಾಗದಲ್ಲಿ ರಾಮಾನುಜ ಮತ್ತು ನಮ್ಮಾಳ್ವರರ ಪ್ರತಿಮೆಗಳೂ ಇವೆ. ಪಾತಾಳಾಂಕಣದ ಪೂರ್ವ ಮಧ್ಯದಲ್ಲಿ ಸದೃಢವಾದ ಕಲ್ಲಿನ ಮಹಾದ್ವಾರ, ಮುಂದೆ ಮತ್ತು ಒಳಗೆ ಎತ್ತರವಾದ ಜಗಲಿಗಳಿವೆ. ಮಹಾದ್ವಾರದ ಮೇಲೆ ಗೋಪುರವಿದ್ದು ಈಗ ಅದು ಪೂರ್ಣವಾಗಿ ಕುಸಿದಿದೆ. ದೇಗುಲದ ಸುತ್ತಲೂ ಎತ್ತರವಾದ ಪ್ರಾಕಾರ ಗೋಡೆಯಿದೆ. ವಾಯವ್ಯದಲ್ಲಿ ಗರ್ಭಗೃಹ, ಸುಕನಾಸಿ, ಮುಖಮಂಟಪವಿರುವ ಅಲಮೇಲಮ್ಮನವರ ಗುಡಿಯಿದೆ. ನೈಋತ್ಯದಲ್ಲಿ ಶ್ರೀರಾಮಲಕ್ಷ್ಮಣ ಸೀತಾರ ವಿಗ್ರಹಗಳಿವೆ. ಈಶಾನ್ಯದಲ್ಲಿ ನಾಲ್ಕು ಕಂಬಗಳ ಸಣ್ಣ ಕಲ್ಯಾಣ ಮಂಟಪವಿದೆ. 'ವರದರಾಜ'ನ ಮೂಲ ವಿಗ್ರಹವು ಐದು ಅಡಿ ಎತ್ತರವಿದೆ. ಇದರ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದ್ದು ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿಯರನ್ನೂ ಕಾಣಬಹುದು. ಹೊಯ್ಸಳ ಶೈಲಿಯ ಅತಿ ಸೂಕ್ಷ್ಮ ಕೆತ್ತನೆ, ಹೊಳಪುಗಳು ವಿಗ್ರಹಕ್ಕೆ ಅದ್ವಿತೀಯ ಸೊಬಗನ್ನು ನೀಡಿವೆ. ಉತ್ತರದ ಗುಡಿಯಲ್ಲಿರುವ ಯೋಗಾನರಸಿಂಹ ಕೂಡ ಅತ್ಯಂತ ಆಕರ್ಷಕ ವಿಗ್ರಹ. ಇಕ್ಕೆಲಗಳಲ್ಲಿ ಶ್ರೀದೇವಿ–ಭೂದೇವಿಯರಿದ್ದಾರೆ.

ವರದರಾಜನ ಗುಡಿಯ ಸುಕನಾಸಿಯ ದ್ವಾರದ ಎರಡೂ ಕಡೆಯಿರುವ ಆರು ಅಡಿ ಎತ್ತರದ ದ್ವಾರಪಾಲಕ ಮೂರ್ತಿಗಳ ಓಜಸ್ಸು, ಸೌಂದರ್ಯಗಳು ಉಲ್ಲೇಖನೀಯ. 'ವಿಜಯನಗರ ಶೈಲಿಯಲ್ಲಿರುವ ಈ ಶಿಲ್ಪಗಳ ಅಂದಕ್ಕೆ ಸರಿಸಾಟಿಯೆನಿಸುವ ದ್ವಾರಪಾಲಕ ಶಿಲ್ಪಗಳು ಕರ್ನಾಟಕದಲ್ಲಿ ಬಹಳ ಅಪರೂಪ' ಎಂದು ಎಂ.ಎಸ್.ಕೃಷ್ಣಮೂರ್ತಿ ಅಭಿಪ್ರಾಯ ಪಡುತ್ತಾರೆ. ಈ ದೇಗುಲದಲ್ಲಿರುವ ಲಕ್ಷ್ಮೀನಾರಾಯಣನ ಶಿಲ್ಪಕ್ಕೆ ಸಾಲಂಕೃತ ಪ್ರಭಾವಳಿಯಿದೆ.

ದೇವಾಲಯದ ಹೊರವಾಸ್ತು ವಿನ್ಯಾಸದಲ್ಲಿ ಸರಳತೆ ಎದ್ದು ಕಾಣುತ್ತದೆ. ಅಧಿಷ್ಠಾನದ ದಿಂಡುಗಳಲ್ಲಿ ಚೋಳ ಶೈಲಿಯ ಪ್ರಭಾವವನ್ನು ಗುರುತಿಸಬಹುದಾಗಿದ್ದು, 'ಭಿತ್ತಿಯ ಅಲಂಕರಣೆಯಲ್ಲಿರುವ ಚಾಚುಪೀಠಗಳು ತಮಿಳುನಾಡಿನಲ್ಲಿ ಚೋಳ–ಪಾಂಡ್ಯರ ಕಾಲದಲ್ಲಿ ಕಂಡುಬರುತ್ತದೆ. ಕರ್ನಾಟಕದಲ್ಲಿ ವಾಸ್ತು ಬೆಳವಣಿಗೆಯ ಈ ಘಟ್ಟವನ್ನು ನಿರೂಪಿಸುವ ದೇವಾಲಯಗಳು ಅಪರೂಪವಾಗಿದ್ದು ಆ ದೃಷ್ಟಿಯಿಂದ ಈ ದೇವಾಲಯ ವಿಶೇಷವೆನ್ನಿಸುತ್ತದೆ' ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಇಲ್ಲಿಯ ವರದರಾಜಗುಡಿ ಉತ್ತರಕ್ಕಿರುವ ಶಾಸನದಲ್ಲಿ ಇಪ್ಪತ್ತು ವರ್ಷಗಳ (೧೩೫೧–೧೩೭೧) ಇತಿಹಾಸವಿದ್ದು ತೃಣಪುರ ಹುಲ್ಲನಹಳ್ಳಿಯಲ್ಲಿ ಪರ್ಮಿದೇವರಸನು ತ್ರಿಜಗನ್ಮಂಗಲ ಬಸದಿಯನ್ನು ನಿರ್ಮಿಸಿ ಮಾಣಿಕ್ಯದೇವ ತೀರ್ಥಂಕರನನ್ನು ಪ್ರತಿಷ್ಠಾಪಿಸಿದ್ದನ್ನು

ದಾಖಲಿಸುತ್ತದೆ. ಅಲ್ಲದೆ ಶಿಥಿಲಾವಸ್ಥೆಯಲ್ಲಿದ್ದ ಪರಮೇಶ್ವರ ಚೈತ್ಯಾಲಯವನ್ನು ದುರಸ್ತಿ ಮಾಡಿ ದತ್ತಿ ಬಿಟ್ಟಿದ್ದನ್ನೂ ದಾಖಲಿಸುತ್ತದೆ. ಅಲ್ಲದೆ, ಇಲ್ಲಿಯ ನಿಷಿದಿಗೆಗಳು ಪೆರುಮಾಳದೇವರಸರು ೧೩೫೬ರಲ್ಲಿ ಕಲ್ಲೇಹದಲ್ಲೂ, ೧೩೬೭ರಲ್ಲಿ ಅಲ್ಲಾಂಬಳು ಹಾಗೂ ೧೩೭೧ರಲ್ಲಿ ಶ್ರುತ್ಮಮುನಿಯರು ಸನ್ಯಾಸನ ವಿಧಿ ಆಚರಿಸಿ ಗತಿಸಿದ್ದನ್ನು ದಾಖಲಿಸುತ್ತಿದ್ದು ಹುಲ್ಲಹಳ್ಳಿಯಲ್ಲಿಂದು ಜೈನಾವಶೇಷಗಳನ್ನು ಶೋಧಿಸುವ ಅಗತ್ಯವಿದೆ. ಇಲ್ಲಿಯ ಮಲ್ಲೇಶ್ವರ ಗುಡಿ ಬಳಿ ಇರುವ ೧೬೧೯ರ ಶಾಸನ ಬಸವರಾಜ ಒಡೆಯರ ದಾನವನ್ನು ದಾಖಲಿಸಿದೆ.

**ಹೆಡತಲೆ (೫,೭೯೧) :** ನಂಜನಗೂಡಿನಿಂದ ಆಗ್ನೇಯಕ್ಕೆ ಸುಮಾರು ೧೪ ಕಿ.ಮೀ.ದೂರದಲ್ಲಿರುವ ಇದು ೧೦–೧೭ನೇ ಶತಮಾನದವರೆಗೆ ವೈಭವದ ದಿನಗಳನ್ನು ಕಂಡಿತ್ತೆಂಬುದು ಇಲ್ಲಿಂದ ಈವರೆಗೆ ವರದಿಯಾಗಿರುವ ಎಂಟಕ್ಕೂ ಹೆಚ್ಚು ಶಾಸನಾಧಾರಗಳಿಂದ ವ್ಯಕ್ತವಾಗುತ್ತದೆ. ಹೆಡತಲೆಯ ಲಕ್ಷ್ಮೀಕಾಂತ ದೇವಾಲಯ ಹೊಯ್ಸಳ ಶೈಲಿಯ ತ್ರಿಕೂಟಾಚಲವಾಗಿದ್ದು, ಮೂರು ಗರ್ಭಗುಡಿಗಳಿವೆ. ಪೂರ್ವಾಭಿಮುಖಿಯಾಗಿರುವ ಮೂಲಗರ್ಭಗುಡಿಯಲ್ಲಿ ಲಕ್ಷ್ಮೀಕಾಂತ, ಬಲಗಿನದರಲ್ಲಿ ವೇಣುಗೋಪಾಲ ಹಾಗೂ ಎಡಗಿನದರಲ್ಲಿ ಲಕ್ಷ್ಮೀನರಸಿಂಹರ ವಿಗ್ರಹಗಳಿವೆ. ಲಕ್ಷ್ಮೀಕಾಂತನ ಗರ್ಭಗುಡಿಗೆ ಸುಕನಾಸಿ ಮತ್ತು ವಿಮಾನಗಳಿವೆ. ಮೂರು ಗರ್ಭಗುಡಿಗಳ ಮುಂದೂ ಅರ್ಧಮಂಟಪಗಳಿದ್ದು ನವರಂಗದ ಮಧ್ಯದ ನಾಲ್ಕು ಕಂಬಗಳೂ ಹೊಯ್ಸಳ ಶಿಲ್ಪಕಲೆಯ ಪಾರಮ್ಯತೆಯನ್ನು ನಿರೂಪಿಸುವಂತಿವೆ. ಮಧ್ಯದ ಭುವನೇಶ್ವರಿ ಮೂರು ಅಡಿ ಆಳವಾಗಿದ್ದು ಸೂಕ್ಷ್ಮಕೆತ್ತನೆಗಳು ಮುಕ್ಕರಿದಿದ್ದು, ಮಧ್ಯದ ತಾವರೆಯ ಮೊಗ್ಗು ತುಂಬ ಆಕರ್ಷಕವಾಗಿದೆ. ಉಳಿದ ಅಂಕಣಗಳ ಭುವನೇಶ್ವರಿಗಳು ಒಂದು ಅಡಿ ಆಳವಾಗಿದ್ದು ಅರಳಿದ ಕಮಲಗಳ ಸೂಕ್ಷ್ಮ ಕೆತ್ತನೆಗಳ ತಾಣವಾಗಿದೆ. ಮುಖಮಂಟಪದ ಮೇಲ್ಛಾವಣಿಯ ಒಂಬತ್ತು ಅಂಕಣಗಳಲ್ಲೂ ಕಮಲದ ಕೆತ್ತನೆಗಳಿವೆ. ಮುಖಮಂಟಪದಿಂದ ಸ್ವಲ್ಪ ಅಂತರದಲ್ಲಿ, ಪ್ರತ್ಯೇಕವಾಗಿ ನಿರ್ಮಿತವಾದ ೨೪ ಕಂಬಗಳ ವಿಶಾಲ ಮಂಟಪವಿದೆ. ಇಲ್ಲಿನ ವಿಜಯನಗರ ಆರಂಭಶೈಲಿಯ ಕಂಬಗಳು ಸುಂದರ, ಕಲಾತ್ಮಕ ಕೆತ್ತನೆಯನ್ನು ಹೊಂದಿವೆ. ಇದರ ಛಾವಣಿಯಲ್ಲಿ ೧೩ ಭುವನೇಶ್ವರಿಗಳಿದ್ದು ಪ್ರತಿಯೊಂದು ಅಂಕಣದ ಭುವನೇಶ್ವರಿಯಲ್ಲೂ ತೂಗಾಡುತ್ತಿರುವ ಕಮಲದ ಮೊಗ್ಗಿನ ಕೆತ್ತನೆಗಳಿವೆ. ನಡುಮಧ್ಯದ ಭುವನೇಶ್ವರಿಯಂತೂ ಮೂರು ಅಡಿ ಆಳದ ಸುಂದರ ಕೆತ್ತನೆಗಳಿಂದ ಕೂಡಿದೆ. ಮಂಟಪಕ್ಕೆ ದಕ್ಷಿಣ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಿಂದ ಪ್ರವೇಶದ್ವಾರಗಳಿದ್ದು ಉತ್ತರದ ದಿಕ್ಕಿನಲ್ಲಿ ಎತ್ತರವಾದ ಜಗುಲಿಯಿತ್ತು. ಆದರೆ ದೇವಾಲಯದ ಜೀರ್ಣೋದ್ಧಾರದ ಸಮಯದಲ್ಲಿ ಇಲ್ಲಿ ಕೂಡ ಪ್ರವೇಶದ್ವಾರವನ್ನು ಮಾಡಲಾಗಿದೆ. ಆದರೂ ಕಂಬಕಂಬಗಳ ನಡುವೆ ಸ್ಪಷ್ಟವಾಗಿ ಗೋಚರಿಸುವಂತೆ ೧೬ ಜಗುಲಿಗಳಿವೆ. ಈ ಮಂಟಪದ ವಾಸ್ತುಕೌಶಲ್ಯವೆಂದರೆ ಉತ್ತರ ದಿಕ್ಕಿನ ಎತ್ತರದ ಆಸನದಲ್ಲಿ ಕುಳಿತು ನೋಡಿದರೆ ಉಳಿದ ಹದಿನೈದು ಜಗಲಿಗಳೂ ಗೋಚರವಾಗುತ್ತವೆ. ಆದರೆ, ಉಳಿದ ಯಾವೊಂದೂ ಜಗಲಿಯಲ್ಲೂ ಹೀಗೆ ಎಲ್ಲ ಜಗಲಿಗಳನ್ನು ನೋಡಲಾಗುವುದಿಲ್ಲ. ಅದರಿಂದಾಗಿ 'ಹದಿನಾರು ಮುಖದ ಚಾವಡಿ' ಎಂದೇ ಈ ಮಂಟಪವಿಂದು ಪ್ರಸಿದ್ಧವಾಗಿದೆ. ಇದೇ ರೀತಿಯ

ಮಂಟಪವನ್ನು ಹಾಸನ ಜಿಲ್ಲೆಯ ಬೆಳವಾಡಿಯ ಹೊಯ್ಸಳ ದೇವಾಲಯದಲ್ಲೂ ಗಮನಿಸಬಹುದು.

ಗುಂಡ್ಲುನದಿ ದಡದಲ್ಲಿರುವ ನಗರೇಶ್ವರ ದೇವಾಲಯದಲ್ಲಿ ಕೂಡ ಹೊಯ್ಸಳ ಶೈಲಿಯು ಪ್ರಧಾನವಾಗಿ ಕಂಡುಬರುತ್ತದೆ. ಆದರೆ, ಗಂಗ ನೀತಿಮಾರ್ಗನ ಉಲ್ಲೇಖದ ಒಂಬತ್ತನೇ ಶತಮಾನದ ಶಾಸನ ಇಲ್ಲಿ ದೊರೆಯುವುದರಿಂದ ಗಂಗರ ಕಾಲದಲ್ಲಿ ನಿರ್ಮಾಣವಾಗಿದ್ದ ದೇಗುಲವನ್ನು ಹೊಯ್ಸಳರು ವಿಸ್ತರಿಸಿದ್ದಾರೆಂದು ಹೇಳಬಹುದು. ಗರ್ಭಗುಡಿಯಲ್ಲಿ ಸುಂದರವಾದ ನಗರೇಶ್ವರ ಲಿಂಗವಿದೆ. ಮುಂದೆ ಸುಕನಾಸಿ ಹಾಗೂ ನವರಂಗಗಳಿವೆ. ನವರಂಗದ ಶಿಲ್ಪಸೌಂದರ್ಯ ಅದ್ಭುತ. ಮಧ್ಯದ ಅಂಕಣದ ಭುವನೇಶ್ವರಿಯ ಸೂಕ್ಷ್ಮ ಕೆತ್ತನೆ, ಅಷ್ಟದಿಕ್ಪಾಲಕರ ಕಂಡರಣೆ ತುಂಬಾ ಸೊಗಸಾಗಿದೆ. ಕಂಬಗಳಲ್ಲೂ ಶಿಲ್ಪನೈಪುಣ್ಯ ಎದ್ದು ಕಾಣುತ್ತದೆ. ಇದರ ಮುಂದಿರುವ ಮುಖಮಂಟಪ ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದೆ. ದೇವಾಲಯವು ತುಂಬಾ ಶಿಥಿಲಾವಸ್ಥೆಯಲ್ಲಿದ್ದು ತುರ್ತು ರಿಪೇರಿಯ ಅಗತ್ಯವಿದೆ.

ಇಲ್ಲಿಯ ಚನ್ನಿಗರಾಯ ಅಥವಾ ಕೇಶವನಾಥ ದೇವಾಲಯ ಹೊಯ್ಸಳ ಶೈಲಿಯ. ಏಕಕೂಟಾಚಲ. ಗರ್ಭಗುಡಿಯ ಕೇಶವನಾಥ ವಿಗ್ರಹವು ಶಂಖ ಚಕ್ರ, ಗದೆ ಮತ್ತು ಅಭಯಮುದ್ರೆಗಳಿಂದ ಆಕರ್ಷಕವಾಗಿದೆ. ಗರ್ಭಗೃಹದ ಮುಂದೆ ಅರ್ಧಮಂಟಪಕ್ಕಿರುವ ದ್ವಾರ ಕೂಡ ಆಕರ್ಷಕ ಕೆತ್ತನೆಗಳಿಂದ ಕೂಡಿದೆ. ನವರಂಗ ವಿಶಾಲವಾಗಿದೆ. ಕಂಬಗಳು ಆಕರ್ಷಕವಾಗಿವೆ. ಮುಖಮಂಟಪವನ್ನು ವಿಜಯನಗರ ಕಾಲದಲ್ಲಿ ನಿರ್ಮಾಣ ಮಾಡಿರಬಹುದು. ಈ ದೇವಾಲಯದ ಒಂದು ಕಂಬದಲ್ಲಿರುವ ಶಾಸನ ಈ ಗುಡಿಯನ್ನು ಕಟ್ಟಿಸಿದ ಹೊಯ್ಸಳ ಮಾಧವ ದಣ್ಣಾಯಕನು ಚೆಲುವರಾಯನ ಪೂಜೆಗಾಗಿ ಹೂತೋಟವೊಂದನ್ನು ದತ್ತಿ ನೀಡಿರುವ ಸಂಗತಿಯನ್ನು ನಿರೂಪಿಸುತ್ತದೆ. ಈಗ ದೇಗುಲವು ಪೂರ್ತಿ ಶಿಥಿಲವಾಗಿದ್ದು, ಚೆಲುವರಾಯನ ವಿಗ್ರಹವನ್ನು ಲಕ್ಷ್ಮೀಕಾಂತ ದೇಗುಲದಲ್ಲಿ ರಕ್ಷಿಸಿಡಲಾಗಿದೆ.

ಭಂಗಿ ಮಾರಮ್ಮನ ಗುಡಿಯಲ್ಲಿರುವ ಏಕಶಿಲಾ ನಿರ್ಮಿತ ಸಪ್ತಮಾತೃಕೆಯರನ್ನು 'ಭಂಗಿಮಾರಮ್ಮ' ಎಂದು ಆರಾಧಿಸಲಾಗುತ್ತಿದೆ. ವಿಜಯನಗರದರಸರ ಕಾಲದಲ್ಲಿ ಗರ್ಭಗುಡಿಯ ಮುಂದಿನ ಅಂಕಣ ನಿರ್ಮಾಣವಾಗಿದೆ. ಗುಡಿ ಚಿಕ್ಕದಾದರೂ ಶಿವರಾತ್ರಿಯ ನಂತರ ನಡೆಯುವ ಆರು ದಿನಗಳ ಜಾತ್ರೆಯ ರಥೋತ್ಸವ ಶುಕ್ರವಾರವೇ ಜರುಗುತ್ತದೆಂಬುದು ವಿಶೇಷ. ಅಲ್ಲದೆ, ಬಿಸಿಲುಮಾರಮ್ಮ, ಬಾಣಂತಿ ಮಾರಮ್ಮ, ಕಾಶಿವಿಶ್ವೇಶ್ವರ, ಆಂಜನೇಯ, ಬೊಮ್ಮದೇವರು, ಶನೀಶ್ವರ ಗುಡಿಗಳೂ ಇಲ್ಲಿವೆ.

ಹೆಡತಲೆಯಲ್ಲಿ ಶ್ರೀರಂಗ ಮಹಾಗುರುಗಳು ಅಷ್ಟಾಂಗಯೋಗ ವಿಜ್ಞಾನ ಮಂದಿರವನ್ನು ಸ್ಥಾಪಿಸುವುದರ ಮೂಲಕ ಈ ಸ್ಥಳಕ್ಕೆ ಆಧ್ಯಾತ್ಮಿಕ ಗೌರವವನ್ನೂ ತಂದುಕೊಟ್ಟಿದ್ದಾರೆ. ಈಗ ಈ ಕೇಂದ್ರ ಮೈಸೂರಿಗೆ ಸ್ಥಳಾಂತರಗೊಂಡಿದೆ. ಇವರಿದ್ದ ಮನೆಯನ್ನು ಆಧ್ಯಾತ್ಮಿಕ ಕೇಂದ್ರವಾಗಿ ರೂಪಿಸುವಂಥ ಎಲ್ಲ ಪ್ರಯತ್ನಗಳು ನಡೆದಿವೆ.

**ಹೆಮ್ಮರಗಾಲ (೩,೩೫೫) :** ನಂಜನಗೂಡಿನಿಂದ ೨೦ ಕಿಲೋಮೀಟರ್ ಅಂತರದಲ್ಲಿರುವ ಈ ಊರು 'ವೇಣುಗೋಪಾಲ', ಬೀರೇದೇವರ ಗುಡಿಗಳಿಂದ ಪ್ರಸಿದ್ಧವಾಗಿದೆ. ಹೊಯ್ಸಳ ಶೈಲಿಯ ವೇಣುಗೋಪಾಲ ದೇವಾಲಯವು ೧೩ನೇ ಶತಮಾನದಾಗಿದ್ದು, ಗರ್ಭಗುಡಿಯಲ್ಲಿರುವ ಗೋಪಾಲಕೃಷ್ಣ ತುಂಬ ಸುಂದರವಾದ ವಿಗ್ರಹ. ನಾಲ್ಕು ಅಡಿ ಎತ್ತರದ ಈ ಶಿಲ್ಪದಲ್ಲಿರುವ ಪ್ರಭಾವಳಿ ಮತ್ತು ಹೊನ್ನೆಮರದ ಕೆಳಗೆ ಕೊಳಲನ್ನೂದುತ್ತ ನಿಂತಿರುವ ಕೃಷ್ಣನ ಕೆತ್ತನೆ ಸೊಗಸಾಗಿದೆ. ಅಲ್ಲದೆ ಜನಾರ್ದನನ ಸುಂದರವಾದ ಕಂಚಿನ ಉತ್ಸವಮೂರ್ತಿಯೂ ಇದೆ. ನವರಂಗದಲ್ಲಿ ರುಕ್ಮಿಣಿ–ಸತ್ಯಭಾಮೆಯರ ಶಿಲ್ಪಗಳಿವೆ. ಪ್ರಾಕಾರದ ಒಂದು ಮಂಟಪದಲ್ಲಿರುವ ೭ x ೬ ೧/೨ ಅಡಿ ವಿಸ್ತೀರ್ಣದ ಕಲ್ಲಿನ ಮಂಚ ಸುಂದರವಾದ ಕೆತ್ತನೆಯಿಂದ ಮನ ಸೆಳೆಯುತ್ತದೆ. ಈ ದೇವಾಲಯವನ್ನು ರಾಜ್ಯಪುರಾತತ್ವ ಇಲಾಖೆಯು ಜೀರ್ಣೋದ್ಧಾರಕ್ಕೊಳಪಡಿಸಿದೆ.

ಇಲ್ಲಿಯ ಬೀರೇದೇವರ ಗುಡಿಯು. ತೆರಕಣಾಂಬಿಯ ಚಿನ್ನಯ್ಯನಿಂದ ನಿರ್ಮಾಣಗೊಂಡಿದ್ದು, ಕಂಠೀರವ ನರಸರಾಜ ಒಡೆಯರು ೧೬೫೩ರಲ್ಲಿ ಇದನ್ನು ಜೀರ್ಣೋದ್ಧಾರ ಮಾಡಿದುದಾಗಿ ತಿಳಿದುಬರುತ್ತದೆ. ಗುಡಿಯಲ್ಲಿರುವ ದ್ವಿಮುಖ ಶಿಲ್ಪದಲ್ಲಿ ಒಂದು ಶಿವನನ್ನೂ, ಮತ್ತೊಂದು ವಿಷ್ಣುವನ್ನೂ ಪ್ರತಿನಿಧಿಸುತ್ತದೆ. ಶಿವಮುಖಕ್ಕೆ ಭಸ್ಮ ಹಾಗೂ ವಿಷ್ಣುವಿನ ಮುಖಕ್ಕೆ ನಾಮಧಾರಣೆ ಮಾಡುತ್ತಾರೆ. ಮೈಸೂರು–ಮಂಡ್ಯ ಪರಿಸರದ ಎಲ್ಲ ಕುರುಬ ಜನಾಂಗದವರಿಗೆ ಆರಾಧ್ಯ ದೈವವಾಗಿರುವ ಈ ಬೀರೇದೇವರ ಪ್ರತೀಕಗಳು ಸುತ್ತಮುತ್ತಣ ಎಲ್ಲ ಜಾತ್ರೆಗೂ ಹೋಗಲೇಬೇಕು. ಆದ್ಯ ಪೂಜೆ ಸಲ್ಲುವುದು ಹೆಮ್ಮರಗಾಲದ ಬೀರೇದೇವರಿಗೇ. ಇಲ್ಲಿನ ಜಾತ್ರೆಗೆ ಸೇರಿದ ಜನರಿಗೆಲ್ಲ ಊಟ ಬಡಿಸಬೇಕೆನ್ನುವುದು ವಿಶೇಷ. ಹೀಗಾಗಿ ಈ ಜಾತ್ರೆಯನ್ನು ತೀರಾ ಅನುಕೂಲವಿದ್ದಾಗ ಮಾತ್ರ ನಡೆಸುತ್ತಾರೆ. ಆಂಜನೇಯ, ಮಹದೇಶ್ವರ, ಮಾರವ್ವ ಮುಂತಾದ ಗುಡಿಗಳೂ ಇಲ್ಲಿವೆ. ಊರಲ್ಲಿ ವೀರಗಲ್ಲು ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ.

**ಹೊಳಲವಾಡಿ (೨೯೫೪) :** ನಂಜನಗೂಡಿಗೆ ಸುಮಾರು ೧೨ ಕಿ.ಮೀ. ದೂರದಲ್ಲಿರುವ ಇದು ಗಂಗರ ಕಾಲದಷ್ಟು ಪುರಾತನ ಗ್ರಾಮವಾಗಿದೆ. ಇಲ್ಲಿಂದ ಈವರೆಗೆ ವರದಿಯಾಗಿರುವ ಆರು ಶಾಸನಗಳಲ್ಲಿ ಎರಡು ಎಂಟನೆಯ ಶತಮಾನಕ್ಕೆ ಸೇರಿದ್ದು ಬೊಮ್ಮಪ್ಪನ ಗುಡಿ ಮುಂದಿರುವ ಶಾಸನ, ಕೆಸಿಲ್ಮನೆಯ ಒಡೆಯರು ಕೆರೆ ಕೆಳಗಣ ಕಳನಿಗದ್ದೆಯನ್ನು ಅಮಿತಭಟ್ಟರಿಗೆ ದತ್ತಿಕೊಟ್ಟಿದ್ದನ್ನು ದಾಖಲಿಸುತ್ತದೆ. ಸುಮಾರು ೧೦ನೇ ಶತಮಾನಕ್ಕೆ ಸೇರಿದ ವೀರಗಲ್ಲು ಶಾಸನದಿಂದ ಯೋಧ ಎರೆಯನು ತಲೆಕಡಿಸಿಕೊಂಡು ಆತ್ಮಾರ್ಪಣೆ ಮಾಡಿಕೊಳ್ಳಲಾಗಿ ಚಂದಯ್ಯನು ೧೦ ಕೊಳಗ ಭೂಮಿಯನ್ನು ದಾನ ನೀಡಿದ್ದು ಗೊತ್ತಾಗುತ್ತದೆ. ಸುಮಾರು ೧೫–೧೬ನೇ ಶತಮಾನಕ್ಕೆ ಸೇರಿದ ಇತರ ಶಾಸನಗಳಿಂದ ಮಲ್ಲಿಕಾರ್ಜುನ ದೇವರ ಸೇವೆಗೆಂದು ಕಳಲೆಯ ಒಡೆಯರು ದಾನ ಬಿಟ್ಟ ಅಂಶ ವೇದ್ಯವಾಗುತ್ತದೆ. ಇಲ್ಲಿಯ ಬೊಮ್ಮಪ್ಪ ಹಾಗೂ ಮಲ್ಲಿಕಾರ್ಜುನ ಗುಡಿಗಳು ಪ್ರಾಚೀನದವಾಗಿದ್ದು, ಸಂರಕ್ಷಿಸುವ ಅಗತ್ಯವಿದೆ.

* * * *